ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಶುಕ್ರವಾರ, ಡಿಸೆಂಬರ್ 25, 2020

ಸಂಪುಟ : 47 ಸಂಚಿಕೆ : 235 ☎ 254736 91642 99999 RNI No: 27369/75, KA/SK/CTA-275/2018-2020. O/P @ J.D. Circle P.O. ಪುಟ : 4 ರೂ : 4.00 www.janathavani.com janathavani@mac.com


# ಜಾರಿಗೆ ಮೊದಲೇ ಕರ್ಫ್ಯೂ ವಾಪಸ್

## ಜನಾಕ್ರೋಶಕ್ಕೆ ಮಣಿದ ರಾಜ್ಯ ಸರ್ಕಾರ

ಬೆಂಗಳೂರು, ಡಿ. 25 – ಸಾರ್ವಜನಿಕ ವಲಯದಿಂದ ಸಾಕಷ್ಟು ಟೀಕೆಗೆ ಗುರಿಯಾಗಿದ್ದ ರಾತ್ರಿ ಕರ್ಫ್ಯೂ ನಿರ್ಧಾರವನ್ನು ರಾಜ್ಯ ಸರ್ಕಾರ ಕೈ ಬಿಟ್ಟಿದೆ.

ರಾತ್ರಿ ಕರ್ಫ್ಯೂ ಮೊದಲು ಬುಧವಾರದಿಂದ ಜಾರಿಯಾಗಲಿದೆ ಎಂದು ರಾಜ್ಯ ಸರ್ಕಾರ ತಿಳಿಸಿತ್ತು. ನಂತರ ಅದನ್ನು ಗುರುವಾರಕ್ಕೆ ಮುಂದೂಡಲಾಯಿತು. ಆದರೆ, ಗುರುವಾರದಂದು ರಾತ್ರಿ ಕರ್ಫ್ಯೂ ವಾಪಸ್ ಪಡೆದಿರುವುದಾಗಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಂಗಳವಾರ ರಾತ್ರಿ ಕರ್ಫ್ಯೂ ಇಲ್ಲ ಎಂದಿದ್ದ ಮುಖ್ಯಮಂತ್ರಿ, ಬುಧವಾರ ಜಾರಿಗೆ ತರುವುದಾಗಿ ಹೇಳಿ, ಗುರುವಾರದಂದು ನಿರ್ಧಾರ ವಾಪಸ್ ಪಡೆಯುವುದರೊಂದಿಗೆ ಕರ್ಫ್ಯೂ ಪ್ರಕರಣ ಮುಕ್ತಾಯ ಕಂಡಿದೆ.

ಬ್ರಿಟನ್ ಹಾಗೂ ಇತರೆ ದೇಶಗಳಲ್ಲಿ ಪತ್ತೆಯಾದ ರೂಪಾಂತರ ಹೊಂದಿದ ಕೋವಿಡ್ ವೈರಾಣುವಿನ ಹರಡುವಿಕೆಯನ್ನು ನಿಯಂತ್ರಿಸುವ ಉದ್ದೇಶದಿಂದ ತಜ್ಞರ ಸಲಹೆಯ ಮೇರೆಗೆ ರಾತ್ರಿ ಕರ್ಫ್ಯೂವನ್ನು ಜಾರಿಗೆ ತರಲು ತೀರ್ಮಾನಿಸಲಾಗಿತ್ತು ಎಂದು ಯಡಿಯೂರಪ್ಪ ಹೇಳಿದ್ದಾರೆ.

ಆದರೆ, ರಾತ್ರಿ ಕರ್ಫ್ಯೂ ಅಗತ್ಯವಿಲ್ಲವೆಂದು ಸಾರ್ವಜನಿಕ ವಲಯದಲ್ಲಿ ಅಭಿಪ್ರಾಯ ವ್ಯಕ್ತವಾದ ಹಿನ್ನೆಲೆಯಲ್ಲಿ ಮರು ಪರಿಶೀಲಿಸಿ, ಸಂಪುಟ ಸಹೋದ್ಯೋಗಿಗಳ ಹಾಗೂ ಹಿರಿಯ ಅಧಿಕಾರಿಗಳ ಅಭಿಪ್ರಾಯದ ಮೇರೆಗೆ ರಾತ್ರಿ ಕರ್ಫ್ಯೂವನ್ನು ಹಿಂಪಡೆಯಲು ತೀರ್ಮಾನಿಸಲಾಗಿದೆ ಎಂದು ತಿಳಿಸಿದ್ದಾರೆ.

ಸಾರ್ವಜನಿಕರು ಸ್ವಯಂ ನಿರ್ಬಂಧ ವಿಧಿಸಿಕೊಂಡು, ಮಾಸ್ಕ್ ಧರಿಸಿ, ಸಾಮಾಜಿಕ ಅಂತರ ಕಾಪಾಡಿಕೊಂಡು, ಅನಗತ್ಯವಾಗಿ ಸಂಚರಿಸದಂತೆ ಹಾಗೂ ಸರ್ಕಾರ ವಿಧಿಸಿದ ಕೋವಿಡ್ ನಿಯಂತ್ರಣ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದರ ಮೂಲಕ ಈ ವೈರಾಣು ಹರಡುವಿಕೆ ತಡೆಯುವಂತೆ ಮನವಿ ಮಾಡಿಕೊಂಡಿದ್ದಾರೆ.



# ಕೊರೊನಾ ಕತ್ತಲ ಕಳೆ ದೇವಕುಮಾರ

## ಚರ್ಚ್‌ಗಳಲ್ಲಿ ಸರಳ ಕ್ರಿಸ್‌ಮಸ್ ಮೂಲಕ ಏಸುವಿಗೆ ಮೊರೆ

ದಾವಣಗೆರೆ, ಡಿ. 24-ಕೊರೊನಾ ಹಿನ್ನೆಲೆಯಲ್ಲಿ ನಗರದ ಚರ್ಚ್‌ಗಳಲ್ಲಿ ಈ ಬಾರಿ ಸರಳ ಕ್ರಿಸ್‌ಮಸ್ ಆಚರಣೆ ನಡೆಯುತ್ತಿದೆ. ವೈಭವದ ಆಚರಣೆಯ ಬದಲು ಸರಳತೆ ಹಾಗೂ ಸಾಮಾಜಿಕ ಅಂತರದೊಂದಿಗೆ, ಕೊರೊನಾ ಶಿಷ್ಟಾಚಾರಗಳನ್ನು ಪಾಲಿಸಿ ಸೋಂಕಿನ ಸಂಕಷ್ಟ ನಿವಾರಿಸಲು ನಮನ ಸಲ್ಲಿಸಲಾಗುತ್ತಿದೆ.

ಕ್ರಿಶ್ಚಿಯನ್ ಬಾಂಧವರ ಅತಿ ದೊಡ್ಡ ಹಬ್ಬವಾದ ಕ್ರಿಸ್‌ಮಸ್ ಕೊರೊನಾ ಕಾಟದಿಂದಾಗಿ ಕಳೆಗುಂದಿದೆ. ಬ್ರಿಟನ್ ಮುಂತಾದ ದೇಶಗಳಲ್ಲಿ ತೀವ್ರವಾಗಿ ಹರಡುವ ಹೊಸ ರೂಪದ ಕೊರೊನಾ ಕಂಡು ಬಂದ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ತೆಗೆದುಕೊಂಡ ರಾತ್ರಿ ಕರ್ಫ್ಯೂ ಸಹ ಕ್ರಿಸ್‌ಮಸ್ ಸಂಪ್ರದಾಯಗಳ ಮೇಲೆ ಪರಿಣಾಮ ಬೀರಿದೆ.

ಕೊರೊನಾ ಶಿಷ್ಟಾಚಾರಗಳಿಗೆ ಅನುಗುಣವಾಗಿ ಚರ್ಚ್‌ಗಳಲ್ಲಿ ಆರಾಧನೆ ಹಾಗೂ ಪ್ರಾರ್ಥನಾ ಸ್ವರೂಪವನ್ನೂ ಸಹ ಬದಲಿಸಲಾಗಿದೆ. ಸಾಮಾಜಿಕ ಅಂತರ, ಸ್ಯಾನಿಟೈಜರ್, ಮಾಸ್ಕ್ ರೀತಿಯ ಕ್ರಮಗಳಿಗೆ ಚರ್ಚ್‌ಗಳು ಮುಂದಾಗಿವೆ. ನಗರದ ಸಂತ ತೋಮಸರ ದೇವಾಲಯದಲ್ಲಿ ತಡ ರಾತ್ರಿ ನಡೆಯುತ್ತಿದ್ದ ದೀಪ ನಮನವನ್ನು ಸಂಜೆ 7 ಗಂಟೆಗೇ ಆಯೋಜಿಸಲಾಗಿತ್ತು. ಏಸು ಕ್ರಿಸ್ತ ಭೂಮಿಯಲ್ಲಿ ಜನಿಸಿದ್ದು ಮಧ್ಯರಾತ್ರಿಯಾದ ಕಾರಣ, ಚರ್ಚ್‌ನಲ್ಲಿ ಮಧ್ಯರಾತ್ರಿಯ ವೇಳೆಯೇ ಆರಾಧನೆ ನಡೆಸಲಾಗುತ್ತಿತ್ತು. ಆದರೆ, ಈ ಬಾರಿ ಆರಾಧನೆ, ಕೀರ್ತನೆ ಹಾಗೂ ಪ್ರವಚನಗಳನ್ನು ಸಂಜೆ 7ರಿಂದ 9ರ ಒಳಗೆ ಆಯೋಜಿಸಲಾಗಿದೆ.

ಪತ್ರಿಕೆಯೊಂದಿಗೆ ಮಾತನಾಡುತ್ತಾ ಈ ವಿಷಯ ತಿಳಿಸಿದ ಚರ್ಚ್‌ನ ಧರ್ಮಗುರುಗಳಾದ ಫಾದರ್ ಸ್ಟೀನ್ ದೇಸಾ, ಕೊರೊನಾ ಹಿನ್ನೆಲೆಯಲ್ಲಿ ಆಡಂಬರದ ಬದಲು ಸರಳ ಆಚರಣೆ ನಡೆಸಲಾಗುತ್ತಿದೆ. ಚರ್ಚ್‌ನ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಆರಾಧನಾ ಬಲಿ ಪೂಜೆಯನ್ನು ಮಧ್ಯರಾತ್ರಿಯ ಬದಲು, ಸಂಜೆ ನಡೆಸಲಾಗುತ್ತಿದೆ ಎಂದು ಹೇಳಿದರು.

### ಕೊರೊನಾ ವಾರಿಯರ್‌ಗಳಿಗೆ ಚರ್ಚ್‌ನಲ್ಲಿ ಅಭಿನಂದನೆ

**ನಗರದ ಸಂತ ತೋಮಸರ ದೇವಾಲಯದಲ್ಲಿ ಕೊರೊನಾ ವೈರಸ್ ವಿರುದ್ಧ ಹೋರಾಟ ನಡೆಸುತ್ತಿರುವ ಕೊರೊನಾ ವಾರಿಯರ್‌ಗಳಿಗೆ ಅಭಿನಂದನೆ ಸಲ್ಲಿಸಲಾಗಿತ್ತು. ಚರ್ಚ್ ಆವರಣದಲ್ಲಿ ಯೋಧರು, ರೈತರು ಹಾಗೂ ಕೊರೊನಾ ವಾರಿಯರ್‌ಗಳನ್ನು ಗೌರವಿಸುವ ಮಾದರಿಗಳನ್ನೂ ನಿರ್ಮಿಸಲಾಗಿತ್ತು.**

**ಕೊರೊನಾ ವೈರಸ್‌ನಿಂದ ರೋಗಿಗಳನ್ನು ಗುಣಪಡಿಸಲು ಹಗಲಿರುಳು ಶ್ರಮಿಸುತ್ತಿರುವ ವೈದ್ಯರು ಶುಶ್ರೂಷಕರು, ಪೊಲೀಸರು, ಪೌರ ಕಾರ್ಮಿಕರು ಹಾಗೂ ಆಶಾ ಕಾರ್ಯಕರ್ತೆಯರು ಇವರೆಲ್ಲರನ್ನು ವಿಶ್ವ ರಕ್ಷಕರು, ಭಾರತದ ಯೋಧರು ಎಂದು ಹೃದಯ ಪೂರ್ವಕವಾಗಿ ಅಭಿನಂದಿಸುವ ಸಂದೇಶವನ್ನೂ ಅಳವಡಿಸಲಾಗಿತ್ತು.**

ಸಾಮಾಜಿಕ ಅಂತರಕ್ಕೆ ವ್ಯವಸ್ಥೆ ಮಾಡಲಾಗಿದೆ. ಭಕ್ತರಿಗೆ ಕೊರೊನಾ ಶಿಷ್ಟಾಚಾರದ ಬಗ್ಗೆ ಮೊದಲೇ ತಿಳಿಸಲಾಗಿದೆ. ಏಸು ಕ್ರಿಸ್ತ ಜನಿಸಿದ್ದನ್ನು ಬಿಂಬಿಸುವ ಗೋದಲಿಯನ್ನು ಈ ಬಾರಿ ಸರಳವಾಗಿ ರೂಪಿಸಲಾಗಿದೆ. ಕೊರೊನಾ ವಾರಿಯರ್‌ಗಳಿಗೆ ಗೌರವಿಸುವ ಮಾದರಿಗಳನ್ನು ಚರ್ಚ್ ಆವರಣದಲ್ಲಿ ನಿರ್ಮಿಸಲಾಗಿದೆ ಎಂದವರು ಹೇಳಿದರು.

ದೇವಕುಮಾರ ಏಸು ಕ್ರಿಸ್ತ ಕೊರೊನಾ ತೊಲಗಿಸಲಿ, ಪ್ರಭುವಿನ ಆಗಮನದಿಂದ ಸಂಕಷ್ಟ ಬಗೆಹರಿಯಲಿ. ಅಶಾಂತಿ (2ನೇ ಪುಟಕ್ಕೆ)

# ಒಂದೇ ಕಾಲೇಜಿನ 17 ವಿದ್ಯಾರ್ಥಿಗಳಿಗೆ ಕೊರೊನಾ

ದಾವಣಗೆರೆ, ಡಿ.24- ನಗರದ ಒಂದೇ ಕಾಲೇಜಿನ 17 ವಿದ್ಯಾರ್ಥಿಗಳಿಗೆ ಕೊರೊನಾ ಸೋಂಕು ದೃಢವಾಗಿರುವ ಘಟನೆ ನಡೆದಿದೆ.

ನಗರದ ನರ್ಸಿಂಗ್ ಕಾಲೇಜಿನ 17 ವಿದ್ಯಾರ್ಥಿಗಳಿಗೆ ಕೊರೊನಾ ಸೋಂಕು ದೃಢವಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಎಲ್ಲಾ ಸೋಂಕಿತ ವಿದ್ಯಾರ್ಥಿಗಳನ್ನು ಜಿಲ್ಲಾಸ್ಪತ್ರೆಗೆ ದಾಖಲಿಸಿ, ಚಿಕಿತ್ಸೆ ನೀಡಲಾಗುತ್ತಿದೆ. ವಿದ್ಯಾರ್ಥಿಗಳೊಂದಿಗೆ ಸಂಪರ್ಕ ಹೊಂದಿದ್ದವರಿಗೆ ಶೋಧ ನಡೆಯುತ್ತಿದೆ. ಅವರನ್ನೂ ಸಹ ಐಸೋಲೇಷನ್‌ನಲ್ಲಿಟ್ಟು ಶೀಘ್ರವೇ ಕೋವಿಡ್ ಪರೀಕ್ಷೆ ಮಾಡಲಿದ್ದೇವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಇನ್ನು ಸೋಂಕಿತ ವಿದ್ಯಾರ್ಥಿಗಳಲ್ಲಿ ಯಾರಿಗೂ ಗಂಭೀರ ರೋಗ ಲಕ್ಷಣಗಳಿಲ್ಲ. ಯಾರೂ ಸಹ ಆತಂಕ ಪಡುವ ಅಗತ್ಯವಿಲ್ಲ.

# ರಾಜ್ಯದ ಎಲ್ಲಾ ಆರೋಗ್ಯ ಕೇಂದ್ರಗಳಲ್ಲಿ 24x7 ಸೇವೆಯನ್ನು ನೀಡಲು ಕ್ರಮ

## ಒಂದೇ ಸೂರಿನಡಿ ಕ್ಯಾನ್ಸರ್, ಹೃದಯ ಬೇನೆ, ಸೇರಿದಂತೆ ಇತರೆ ರೋಗಗಳಿಗೆ ಚಿಕಿತ್ಸೆ

ಬೆಂಗಳೂರು, ಡಿ. 24- ರಾಜ್ಯದ ಎಲ್ಲಾ ಆರೋಗ್ಯ ಕೇಂದ್ರಗಳಲ್ಲಿ ಇನ್ನು ಮುಂದೆ 24x7 ಸೇವೆಯನ್ನು ನೀಡಲು ಕ್ರಮ ತೆಗೆದುಕೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಇಂದಿಲ್ಲಿ ಪ್ರಕಟಿಸಿದ್ದಾರೆ.

ಅಷ್ಟೇ ಅಲ್ಲ ಜಿಲ್ಲಾ ಆಸ್ಪತ್ರೆಗಳನ್ನು 200 ಹಾಸಿಗೆಯಿಂದ 700 ಹಾಸಿಗೆಯವರೆಗೂ ಹೆಚ್ಚಳ ಮಾಡಿ, ಒಂದೇ ಸೂರಿನಡಿ ಮಾರಣಾಂತಿಕ ಕಾಯಿಲೆಗಳಾದ ಕ್ಯಾನ್ಸರ್, ಹೃದಯ ಬೇನೆ, ಸೇರಿದಂತೆ ಇತರೆ ರೋಗಗಳಿಗೆ ಚಿಕಿತ್ಸೆ ಕಲ್ಪಿಸಲಾಗುವುದು ಎಂದಿದ್ದಾರೆ.

ಗೃಹ ಕಚೇರಿ ಕೃಷ್ಣಾದಲ್ಲಿ ಆರೋಗ್ಯ ಇಲಾಖೆ ವತಿಯಿಂದ ಆಯೋಜಿಸಿರುವ ಮಾದರಿ ಪ್ರಾಥಮಿಕ ಆರೋಗ್ಯ ಕೇಂದ್ರದ ಪ್ರಾತ್ಯಕ್ಷಿಕೆ ವೀಕ್ಷಿಸಿ, ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬೆಂಗಳೂರು, ಮಂಗಳೂರು, ಹುಬ್ಬಳ್ಳಿ ನಗರಗಳಿಗೆ ಪಟ್ಟಣ ಪ್ರದೇಶಗಳಿಂದ ರೋಗಿಗಳು ಬರುವುದನ್ನು ತಪ್ಪಿಸಲು ಜಿಲ್ಲಾ ಆಸ್ಪತ್ರೆಗಳನ್ನು ಅಭಿವೃದ್ಧಿಪಡಿಸಲಾಗುವುದು ಮತ್ತು ಅವುಗಳನ್ನು ವೈದ್ಯಕೀಯ ಆಸ್ಪತ್ರೆಗಳನ್ನಾಗಿ ಪರಿವರ್ತಿಸುವುದಾಗಿ ತಿಳಿಸಿದರು. ಇದಕ್ಕೆ (2ನೇ ಪುಟಕ್ಕೆ)

# ಶಾಲೆ ಪ್ರಾರಂಭ ಮಾಡುವುದು ಸರ್ಕಾರದ ಪ್ರತಿಷ್ಠೆಗಾಗಿ ಅಲ್ಲ

ಬೆಂಗಳೂರು, ಡಿ. 24- ಶಾಲೆಗಳನ್ನು ಪ್ರಾರಂಭ ಮಾಡುವುದು ಸರ್ಕಾರದ ಪ್ರತಿಷ್ಠೆಗೆ ಅಲ್ಲ. ಮಕ್ಕಳ ವಿದ್ಯಾಭ್ಯಾಸದ ದೃಷ್ಟಿಯಿಂದ ಜನವರಿ 1 ರಿಂದ ಶಾಲೆಗಳನ್ನು ಆರಂಭಿಸಲು ನಿರ್ಧರಿಸಲಾಗಿದೆ ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಸುರೇಶ್‌ಕುಮಾರ್ ಇಂದಿಲ್ಲಿ ತಿಳಿಸಿದ್ದಾರೆ.



ಶಾಲೆಗಳ ಪ್ರಾರಂಭಕ್ಕೂ ಮುನ್ನ ಕೇಳಿ ಬರುತ್ತಿರುವ ಅಭಿಪ್ರಾಯಗಳಿಗೆ ಕಿಡಿಕಾರಿದ ಸಚಿವರು, ವೈಯಕ್ತಿಕ ಪ್ರತಿಷ್ಠೆಗಾಗಿ ಕೆಲಸ ಮಾಡುತ್ತಿಲ್ಲ. ರಾಜ್ಯದ ಶ್ರೇಯೋಭಿವೃದ್ಧಿಗೆ ದುಡಿಯುತ್ತಿದ್ದೇವೆ ಎಂದರು.

ಮುಖ್ಯಮಂತ್ರಿಯವರನ್ನು ಭೇಟಿ ಮಾಡಿದ ನಂತರ (3ನೇ ಪುಟಕ್ಕೆ)

# ಬೆಂಬಲ ಬೆಲೆ ಚರ್ಚಿಸುವುದು ತಾರ್ಕಿಕವಲ್ಲ

## ರೈತ ಮುಖಂಡರು ಚರ್ಚೆಗೆ ಬರಲು ಮತ್ತೊಮ್ಮೆ ಆಹ್ವಾನ

ನವದೆಹಲಿ ಡಿ. 24 – ಪ್ರತಿಭಟನಾ ನಿರತ ರೈತ ಒಕ್ಕೂಟಗಳು ಮಾತುಕತೆಗೆ ಬರುವಂತೆ ಕೇಂದ್ರ ಸರ್ಕಾರ ಮತ್ತೊಮ್ಮೆ ಆಹ್ವಾನ ನೀಡಿದೆ. ಆದರೆ, ಮೂರು ಕೃಷಿ ಕಾಯ್ದೆಗಳಿಗೂ ಕನಿಷ್ಠ ಬೆಂಬಲ ಬೆಲೆಗೂ ಸಂಬಂಧ ಇರದೇ ಇರುವ ಕಾರಣ, ಬೆಂಬಲ ಬೆಲೆ ಬಗ್ಗೆ ಚರ್ಚಿಸುವುದು ತಾರ್ಕಿಕವಲ್ಲ ಎಂದು ಹೇಳಿದೆ.

40 ರೈತ ಮುಖಂಡರಿಗೆ ಮೂರು ಪುಟಗಳ ಪತ್ರ ಬರೆದಿರುವ ಕೇಂದ್ರ ಕೃಷಿ ಸಚಿವಾಲಯದ ಜಂಟಿ ಕಾರ್ಯದರ್ಶಿ ವಿವೇಕ್ ಅಗರ್‌ವಾಲ್, ಸರ್ಕಾರ ಎಲ್ಲ ವಿಷಯಗಳನ್ನು ಮುಕ್ತವಾಗಿ ಚರ್ಚಿಸಲಿದೆ ಹಾಗೂ ಪ್ರತಿಭಟನೆ ಅಂತ್ಯಗೊಳಿಸುವ ಸದುದ್ದೇಶ ಹೊಂದಿದೆ. ಹೀಗಾಗಿ ಮುಂದಿನ ಸುತ್ತಿನ ಮಾತುಕತೆಯ ದಿನಾಂಕ ಹಾಗೂ ಸಮಯ ತಿಳಿಸಿ ಎಂದು ಕೇಳಿದ್ದಾರೆ.

ಸರ್ಕಾರ ಹಾಗೂ ಪ್ರತಿಭಟನಾ ನಿರತ ಒಕ್ಕೂಟಗಳ ನಡುವೆ ಈ ಹಿಂದೆ ಐದು ಸುತ್ತಿನ ಮಾತುಕತೆಗಳು ನಡೆದಿವೆ. ಆದರೆ, ಯಾವುದೇ ನಿರ್ಧಾರಕ್ಕೆ ಬರಲು ಸಾಧ್ಯವಾಗಿಲ್ಲ. ಚರ್ಚೆ ನಡೆಸಬೇಕಾದ ಇತರೆ ವಿಷಯಗಳ ಕುರಿತು ರೈತ ನಾಯಕರು ತಿಳಿಸಬೇಕು. ನವದೆಹಲಿಯ ವಿಜ್ಞಾನ ಭವನದಲ್ಲಿ ಸಚಿವಾಲಯ ಹಂತದ ಮಾತುಕತೆ ನಡೆಯಲಿದೆ ಎಂದು ಅಗರ್‌ವಾಲ್ ಹೇಳಿದ್ದಾರೆ.

ಕನಿಷ್ಠ ಬೆಂಬಲ ಬೆಲೆಗೂ ಕೃಷಿ ಕಾಯ್ದೆಗಳಿಗೂ ಯಾವುದೇ ಸಂಬಂಧ ಇಲ್ಲ. (3ನೇ ಪುಟಕ್ಕೆ)

# ಸುರಕ್ಷತೆ, ಮುಂಜಾಗ್ರತೆ ಕ್ರಮಕ್ಕೆ ಸೂಚನೆ

**ಜ.1 ರಿಂದ ಶಾಲೆಗಳು ಮತ್ತು ವಿದ್ಯಾಗಮ ಆರಂಭ**

ದಾವಣಗೆರೆ, ಡಿ.24- ಜ.1 ರಂದು ಎಲ್ಲಾ ಸರ್ಕಾರಿ/ಅನುದಾನಿತ/ಅನುದಾನ ರಹಿತ ಶಾಲೆಗಳಲ್ಲಿ 10ನೇ ತರಗತಿ ಪ್ರಾರಂಭ ಮತ್ತು 6 ರಿಂದ 9ನೇ ತರಗತಿ ಮಕ್ಕಳಿಗೆ ವಿದ್ಯಾಗಮ ತರಗತಿಗಳನ್ನು ಪ್ರಾರಂಭಿಸುವಂತೆ ಸರ್ಕಾರ ಸುತ್ತೋಲೆ ಹೊರಡಿಸಿರುವ ಹಿನ್ನೆಲೆಯಲ್ಲಿ, ಶಾಲೆಗಳಲ್ಲಿ ತೆಗೆದುಕೊಳ್ಳಬೇಕಾದ ಸುರಕ್ಷತೆ ಮತ್ತು ಮುಂಜಾಗ್ರತಾ ಕ್ರಮಗಳನ್ನು ಅನುಸರಿಸುವಂತೆ ಶಾಲೆಗಳ ಮುಖ್ಯ ಶಿಕ್ಷಕರುಗಳಿಗೆ ಸೂಚನೆ ನೀಡಲಾಗಿದೆ.

ಇದಕ್ಕೆ ಸಂಬಂಧಿಸಿದಂತೆ ಮಕ್ಕಳಿಗೆ ಹಾಜರಾತಿ ಕಡ್ಡಾಯವಾಗಿರುವುದಿಲ್ಲ. ಮಕ್ಕಳು ಶಾಲೆಗೆ ಹಾಜರಾಗಲು ಪೋಷಕರ ಒಪ್ಪಿಗೆ ಪತ್ರ ಕಡ್ಡಾಯವಾಗಿರುತ್ತದೆ. ಕೋವಿಡ್-19 ಹಿನ್ನೆಲೆಯಲ್ಲಿ ಶಾಲೆಗಳನ್ನು/ವಿದ್ಯಾಗಮ ಪ್ರಾರಂಭಿಸಲು ಪ್ರಮಾಣಿತ (2ನೇ ಪುಟಕ್ಕೆ)

# ಮಾಸ್ಕ್ ಹಾಕಿದ್ದರೂ ದಂಡ: ಶಾಸಕ ದೂರು

ಬೆಂಗಳೂರು, ಡಿ. 24 – ಮಾಸ್ಕ್ ಧರಿಸಿದ್ದರೂ ಸಹ ತಮಗೆ ಪೊಲೀಸರು 250 ರೂ.ಗಳ ತಂಡ ವಿಧಿಸಿರುವುದಾಗಿ (2ನೇ ಪುಟಕ್ಕೆ)


॥ ಶ್ರೀ ಗುರು ಕೊಟ್ಟೂರೇಶ್ವರ ಪ್ರಸನ್ನ ॥

ಕೈಲಾಸ ಸಮಾರಾಧನೆ ಆಹ್ವಾನ ಪತ್ರಿಕೆ



ಶ್ರೀ ಅಂದನೂರು ಮುರುಗೇಶಪ್ಪ ಮತ್ತು ಸಹೋದರರು ದಾವಣಗೆರೆ
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ 23.12.2020ರ ಬುಧವಾರ ಬೆಳಗ್ಗೆ 11.00 ಗಂಟೆಗೆ ನಮ್ಮ ಸಹೋದರನಾದ
ಶ್ರೀ ಅಂದನೂರು ಮುಪ್ಪಣ್ಣನವರ ಧರ್ಮಪತ್ನಿ
ಶ್ರೀಮತಿ ಅಂದನೂರು ಸಂಧ್ಯಾ
ಇವರು ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
ಕೈಲಾಸ ಸಮಾರಾಧನೆಯನ್ನು
ದಿನಾಂಕ 25.12.2020 ನೇ ಶುಕ್ರವಾರ ಮಧ್ಯಾಹ್ನ 12.30ಕ್ಕೆ ದಾವಣಗೆರೆ, 7ನೇ ಮೇನ್, 4ನೇ ಕ್ರಾಸ್ ಎಂ.ಸಿ.ಸಿ. 'ಬಿ' ಬ್ಲಾಕ್‌ನಲ್ಲಿರುವ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ಕೋರುವ.
ಇಂತಿ ದುಃಖತಪ್ತರು :
ಶ್ರೀ ಅಂದನೂರು ಮುರುಗೇಶಪ್ಪ ಮತ್ತು ಸಹೋದರರು,
ಶ್ರೀ ಕೆ.ಆರ್. ಶಿವಪ್ರಕಾಶ್ ಮತ್ತು ಮಕ್ಕಳು, ಚಿತ್ರದುರ್ಗ
ಅಂದನೂರು ವಂಶಸ್ಥರು ಹಾಗೂ ಬಂಧು-ಮಿತ್ರರು.





10th Year Memory
In ever loving Memory of
Smt. K.L. Yashodha
w/o Late Sri B.K.G. Lakshman Setty
Who left us on 25.12.2010
Smt. K.L. Yashodha
24.12.1932 - 25.12.2010
Daughters and Son's In-Law
Smt. Geetha Srinivasulu, Hospet
Smt. Dr. Sunitha & Sri T.V. Sushil Kumar, Lincolnshire, U.K.
Smt. Sadhana & Sri Nagendra Prasad, Mysore
Smt. Dr. Vandana & Sri Dr. Rajendra Desai, Davangere
Smt. Lakshmi & Sri Sreeram, Sydney, Australia
Grand Children :
Sindhu, Santosh, Sripal, Teju, Shantanu And Pooja



ನಾಟಿ ರುಚಿ ದಾವಣಗೆರೆ
ನಾನ್-ವೆಜ್ ರೆಸ್ಟೋರೆಂಟ್
Nati Ruchi NON-VEG RESTAURANT
ಕ್ರಿಸ್-ಮಸ್ ಹಾಗೂ ಹೊಸ ವರ್ಷದ ಶುಭಾಷಯಗಳು
New year 2021
ಹಬ್ಬದ ವಿಶೇಷ ಕೊಡುಗೆ
2 ಪ್ಲೇಟ್ ಚಿಕನ್ ಬಿರಿಯಾನಿ ಕೊಂಡರೆ
1 ಪ್ಲೇಟ್ ಚಿಕನ್ ಲಾಲಿಪಾಪ್ ಉಚಿತ
ದಿನಾಂಕ : 25-12-2020 ರಿಂದ 03-01-2021ರ ವರೆಗೆ
BUY 2 PLATE CHICKEN BIRIYANI GET 1 PLATE CHICKEN LOLLYPOP FREE
#900/ಡಿ3, ಎಸ್.ಎಸ್. ಕಾಂಪ್ಲೆಕ್ಸ್, ಜಿ. ಯೋಗಿರೆಡ್ಡಿ ಬಿಲ್ಡಿಂಗ್ ಹಿಂಭಾಗ, ಹೈ-ಟೆಕ್ ಹಾಸ್ಪಿಟಲ್ ರಸ್ತೆ, 'ಬಿ' ಬ್ಲಾಕ್ ಜಯನಗರ, ದಾವಣಗೆರೆ.
ಮೊ : 81472 94281






ದಾವಣಗೆರೆಯಲ್ಲಿ ಅತೀ ಕಡಿಮೆ ಚಿನ್ನದ ದರ
ಮತ್ತು ಚಿನ್ನಾಭರಣಕ್ಕೆ ಅತೀ ಕಡಿಮೆ ತಯಾರಿಕಾ ವೆಚ್ಚ
Flat 50% ಕಡಿತ
ಎಲ್ಲಾ ಚಿನ್ನಾಭರಣಗಳ ತಯಾರಿಕಾ ವೆಚ್ಚದ ಮೇಲೆ
₹25 ಕಡಿಮೆ ಮಾರ್ಕೆಟ್ ಚಿನ್ನದ ದರಕ್ಕಿಂತ
ನಿನ್ನೆಯ ಚಿನ್ನದ ದರ (24-12-2020)
ಸುಲ್ತಾನ್‌ನ ಚಿನ್ನದ ದರ ₹4645 ಪ್ರತೀ ಗ್ರಾಂ ಗೆ
ಮಾರ್ಕೆಟ್ ಚಿನ್ನದ ದರ ₹4670 ಪ್ರತೀ ಗ್ರಾಂ ಗೆ
— Till 31st Dec. —
100% BIS ಹಾಲ್ ಮಾರ್ಕ್‌ಡ್ 916 ಶುದ್ಧ ಚಿನ್ನ ಭಾರತದಲ್ಲಿ ಅತೀ ಕಡಿಮೆ ದರ
DAVANAGERE: SHRAMAJEEVI COMPLEX, OPP: RMC LINK ROAD, P. B. ROAD. PH: 08192 251916, 252916
www.sulthandiamondsandgold.com sulthandiamondsandgold
BENGALURU-ULSOOR • BENGALURU-JAYANAGAR • DAVANAGERE • SHIVAMOGGA • UDUPI • SURATHKAL • MANGALORE • KANHANGAD • KASARAGOD
Benchmarkinternational.in

**ಮನೆ ಮಾರಾಟಕ್ಕಿದೆ**
ಕುವೆಂಪು ಬಡಾವಣೆಯಲ್ಲಿ 40x60 North, 3 ಬೆಡ್‌ರೂಂ ಮನೆ ಇಂಡಿಪೆಂಡೆಂಟ್ ಹೌಸ್.
ರಿಯಲ್ ಎಸ್ಟೇಟ್ ಏಜೆಂಟ್ ಐನಳ್ಳಿ ಚನ್ನಬಸಪ್ಪ
99166 12110

**ಸೈಟ್‌ಗಳು ಮಾರಾಟಕ್ಕಿವೆ**
ವಿನಾಯಕ ಬಡಾವಣೆಯಲ್ಲಿ 30x36 ಉತ್ತರ, 40x50 ಪೂರ್ವ, ಬನಶಂಕರಿ ಬಡಾವಣೆಯಲ್ಲಿ 30x50 ಪೂರ್ವ, 29x50 ಪೂರ್ವ ದಕ್ಷಿಣ ಕಾರ್ನರ್
ಸ್ವಾಮಿ ಏಜೆಂಟ್ ವಿದ್ಯಾನಗರ 97421 44715
ಶಾಮನೂರು ನಾಗರಾಜ್ 98448 83303

**ತಕ್ಷಣ ಬೇಕಾಗಿದ್ದಾರೆ**
ದಾವಣಗೆರೆಯಲ್ಲಿ ಕೆಲಸ ಮಾಡಲು ಸೆಕ್ಯುರಿಟಿ ಸೂಪರ್‌ವೈಸರ್ ಮತ್ತು ಸೆಕ್ಯುರಿಟಿ ಗಾರ್ಡ್ಸ್ ಬೇಕಾಗಿದ್ದಾರೆ. ವಿದ್ಯಾರ್ಹತೆ : ಎಸ್ಸೆಸ್ಸೆಲ್ಸಿ ಪಾಸ್, ESI, PF ವೇತನ : 7,500 ರಿಂದ 10,000 ರೂ. ಕೊಡಲಾಗುವುದು. ಅನುಭವವಿರುವವರಿಗೆ ಆದ್ಯತೆ.
98440 53261, 99867 21420

**ಸೈಟುಗಳು/ಮನೆಗಳು ಮಾರಾಟಕ್ಕಿವೆ**
ಶಿವಪಾರ್ವತಿ ಬಡಾವಣೆ 30×40 ಪಶ್ಚಿಮ ಕುವೆಂಪು ಬಡಾವಣೆ ಮನೆಗಳು 20×48 ಪೂರ್ವ, ಆರ್.ಟಿ.ಓ. ರಿಂಗ್ ರೋಡ್ ಸರ್ಕಲ್ ಹತ್ತಿರ 40×60 ಮನೆ, ಪೂರ್ವ ದಿಕ್ಕು, ನಿಜಲಿಂಗಪ್ಪ ಬಡಾವಣೆ ಪಶ್ಚಿಮ-ಪೂರ್ವ ದಿಕ್ಕಿನ ಮನೆಗಳು/ಸೈಟುಗಳು, ಕುವೆಂಪು ಬಡಾವಣೆ ಉತ್ತರ 40×60, ಪಶ್ಚಿಮ, ಸಿದ್ದವೀರಪ್ಪ ಬಡಾವಣೆ ಪಶ್ಚಿಮ, 30×50 ಪೂರ್ವ, ವಿನೋಬನಗರ, ರಿಂಗ್ ರೋಡ್ ಹತ್ತಿರ, 30×40 ಉತ್ತರ.
ಕೊಡುವುದಕ್ಕೂ, ತೆಗೆದುಕೊಳ್ಳುವುದಕ್ಕೂ ಸಂಪರ್ಕಿಸಿ
ಸುರೇಶ್, 95911 60520
ಐಗೂರು ವಿಜಯ್‌ಕುಮಾರ್, 99457 02495

**40x60 ಸೈಟ್‌ಗಳು ಮಾರಾಟಕ್ಕಿವೆ**
40x60 North, ವಿವೇಕಾನಂದ ಬಡಾವಣೆಯಲ್ಲಿ, 40x60 East, ವಿನಾಯಕ ಬಡಾವಣೆಯಲ್ಲಿ 40x60 East ಜೆ.ಹೆಚ್ ಪಟೇಲ್ ಬಡಾವಣೆಯಲ್ಲಿ
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಸೈಟು ಮಾರಾಟಕ್ಕೆ (ದಕ್ಷಿಣ)**
ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ (ಮನೆ ಕಟ್ಟಲು ತುಂಬಾ ಚೆನ್ನಾಗಿದೆ) 40x60 ದಕ್ಷಿಣ
ಬೂಸ್ನೂರ್ ಕಿರಣ್ (ಏಜೆಂಟ್)
(ನೇರವಾಗಿ ರಿಜಿಸ್ಟರ್ ಪಾರ್ಟಿಯಿಂದ ಮತ್ತು ಕೇವಲ ಅರ್ಧ ಪರ್ಸೆಂಟ್ (1/2%) ಕಮೀಷನ್ ಗೆ)
ಆಫೀಸ್ ನಂ. 97315-63409 98440-63409

**ಸೈಟ್‌ಗಳು ಮಾರಾಟಕ್ಕಿವೆ**
ಶಿವ ಪಾರ್ವತಿ ಬಡಾವಣೆಯಲ್ಲಿ 30x40 ಪಶ್ಚಿಮ, 30x55 ಪೂರ್ವ, ಡಾಲರ್ಸ್ ಕಾಲೋನಿಯಲ್ಲಿ 40x60, ಉತ್ತರ 30x50 ದಕ್ಷಿಣ
ಶಾಮನೂರು ಧನ್ಯಕುಮಾರ್ 97415 62589
ಸ್ವಾಮಿ ಏಜೆಂಟ್ ವಿದ್ಯಾನಗರ 97421 44715

**ನೇರ ಪರೀಕ್ಷೆಗಳು**
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ
S.S.L.C., PUC, Technical & Non Technical Courses, Pharmacy & BHMS (Goverment & Private College)
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ರಾಂ ಅಂಡ್ ಕೋ ಸರ್ಕಲ್, ಸೋಮ ಮೆಡಿಕಲ್ಸ್ ಮೇಲೆ ಗಣೇಶ ದೇವಸ್ಥಾನದ ಹಿಂಭಾಗ, ದಾವಣಗೆರೆ.
87490 24789, 94837 64859, 87620 58369
82173 02649, 80507 27467

**3 ಬೆಡ್ ರೂಂ ಮನೆ ಬಾಡಿಗೆಗೆ ಇದೆ**
ದಾವಣಗೆರೆ ವಿದ್ಯಾನಗರ 2ನೇ ಬಸ್‌ಸ್ಟಾಪ್ ಹತ್ತಿರ, 2A ಮೇನ್, 8ನೇ ಕ್ರಾಸ್ ತರಳಬಾಳು ಬಡಾವಣೆಯಲ್ಲಿ ಮೊದಲನೇ ಮಹಡಿಯಲ್ಲಿ ಉತ್ತಾರಭಿಮುಖದ 3 ಬೆಡ್ ರೂಂ ಮನೆ ಬಾಡಿಗೆಗೆ ಇದೆ. ಬೋರ್, ಕಾರ್ಪೊರೇಷನ್ ನೀರು ಹಾಗೂ ಕಾರ್ ಪಾರ್ಕಿಂಗ್ ಸೌಲಭ್ಯವಿದೆ. ಆಸಕ್ತರು ಸಂಪರ್ಕಿಸಿ:
99026 88442

**ಮಹಿಳೆ ಬೇಕಾಗಿದ್ದಾರೆ**
ಆಂಜನೇಯ ಬಡಾವಣೆಯ ಮನೆಯಲ್ಲಿ ಮನೆ ಕೆಲಸದೊಂದಿಗೆ ಅಡುಗೆ ಮಾಡಲು ಮಧ್ಯ ವಯಸ್ಸಿನ ಮಹಿಳೆ ಬೇಕಾಗಿದ್ದಾರೆ. ಸಂಪರ್ಕಿಸಿ :
97409-84864

**ಮನೆ ಬಾಡಿಗೆಗೆ ಇದೆ**
ಟಿ.ವಿ. ಸ್ಟೇಷನ್‌ಗೆ, ಸರ್.ಎಂ.ವಿ. ಕಾಲೇಜ್, ಶಶಿ ಸೋಪ್ ಫ್ಯಾಕ್ಟರಿಗೆ, ಹೈಟೆಕ್ ಆಸ್ಪತ್ರೆಗೆ ತುಂಬಾ ಹತ್ತಿರವಿರುವ ವಿಶಾಲವಾದ ಹಾಲ್, 2 ಬೆಡ್‌ರೂಂ, 2 ಬಾತ್‌ರೂಂ, ಸೋಲಾರ್, ಕಾರ್ ಪಾರ್ಕಿಂಗ್, ಸದಾ ನೀರಿನ ವ್ಯವಸ್ಥೆ, ವಾಸ್ತು ಪ್ರಕಾರವಿರುವ ಮನೆ ಕ್ಲೀನ್ ಆಗಿ ಮನೆ ಇಟ್ಟುಕೊಳ್ಳುವವರಿಗೆ, ಹಿಂದೂ ಜನಕ್ಕೆ ಆರೋಗ್ಯವಂತರಿಗೆ ಮಾತ್ರ ವಿಚಾರಿಸಿ.
99865 38099, 99806 11110

**ಡ್ಯೂಪ್ಲೆಕ್ಸ್ ಮನೆ ಮಾರಾಟಕ್ಕಿದೆ**
6BHK ಮನೆ 60x44 ವಿಸ್ತೀರ್ಣ, ಕಾರ್ ಪಾರ್ಕಿಂಗ್ ವ್ಯವಸ್ಥೆಯುಳ್ಳ, ಡ್ಯೂಪ್ಲೆಕ್ಸ್ ಮನೆ #1935/7, 10ನೇ ಕ್ರಾಸ್, ಸಿದ್ದವೀರಪ್ಪ ಬಡಾವಣೆಯಲ್ಲಿ ಮಾರಾಟಕ್ಕಿದೆ.
99007 00091

**ಮನೆ ಬಾಡಿಗೆಗೆ ಇದೆ**
ದಾವಣಗೆರೆ ಪಿ.ಜೆ. ಬಡಾವಣೆ 8ನೇ ಮುಖ್ಯರಸ್ತೆಯಲ್ಲಿ ಲ್ಯಾಬ್‌ಗಳು ಹಾಗೂ ಕಛೇರಿಗೆ, ವಸತಿಗೆ ಅನುಕೂಲವಾಗಿರುವ (#689/1) 4 ಬೆಡ್ ರೂಂನ ಇಂಡಿಪೆಂಡೆಂಟ್ ಮನೆ ಬಾಡಿಗೆಗೆ ಇದೆ. ಬೋರ್ ಹಾಗೂ ಕಾರ್ಪೊರೇಷನ್ ನೀರಿನ ಸೌಲಭ್ಯವಿದೆ.
94482 74343

**ಮನೆಗಳು ಮಾರಾಟಕ್ಕಿವೆ**
ಸಿದ್ದವೀರಪ್ಪ ಬಡಾವಣೆಯಲ್ಲಿ 30x40 (ಪೂರ್ವ) ಡುಪ್ಲೆಕ್ಸ್ ಮನೆ., ಸರಸ್ವತಿ ಬಡಾವಣೆಯಲ್ಲಿ 30x50 (ಪೂರ್ವ), ಎಸ್.ಎಸ್. ಬಡಾವಣೆಯಲ್ಲಿ 30x40 (ಉತ್ತರ), ನಿಜಲಿಂಗಪ್ಪ ಬಡಾವಣೆಯಲ್ಲಿ 30x35 (ಉತ್ತರ) ಶಕ್ತಿನಗರದಲ್ಲಿ 20x30 (ಉತ್ತರ) , ಚಿಕ್ಕಮ್ಮಣಿ ಲೇಔಟ್‌ನಲ್ಲಿ 3ಪ್ಲೋರ್ (ಪೂರ್ವ) ಹಾಗೂ ಶಿವ ಪಾರ್ವತಿ ಲೇಔಟ್‌ನಲ್ಲಿ 30x40 (ಉತ್ತರ) ಮನೆ ಮಾರಾಟಕ್ಕಿದೆ.
98804 40602

ಶ್ರೀ ಗುರು ಮರುಳಸಿದ್ದೇಶ್ವರ ಸ್ವಾಮಿ ಸೇವಾ ಸಂಸ್ಥೆ (ರಿ.)
**ಹಿಂದೂ ವಧು-ವರರ ಮಾಹಿತಿ ಕೇಂದ್ರ,**
www.hindusmatrimony.com
ನಮ್ಮಲ್ಲಿ ಎಲ್ಲಾ ತರಹದ ಹಿಂದೂ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಬಾಣಾಪುರಮಠ ಹಾಸ್ಪಿಟಲ್ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-2.
94481-59303, 94834 63783

**ಶ್ರೀ ಮೃತ್ಯುಂಜಯ ಸ್ಕೂಲ್ ಆಫ್ ನರ್ಸಿಂಗ್ & ಇನ್‌ಸ್ಟಿಟ್ಯೂಟ್ ಆಫ್ ಪ್ಯಾರಾಮೆಡಿಕಲ್ ಸೈನ್ಸಸ್**
ಪ್ರವೇಶ ಪ್ರಾರಂಭ :
ಜಿ.ಎನ್.ಎಂ. (GNM), ಲ್ಯಾಬ್ (LAB), ಹೆಲ್ತ್ (Health) ಓಟಿ (OT)
ಪಿ.ಜೆ. ಬಡಾವಣೆ, ದಾವಣಗೆರೆ.
97432 10028, 94488 73558

ಉತ್ತಮ ಗುಣಮಟ್ಟದ ಕಡಿಮೆ ದರದಲ್ಲಿ ಎಂ.ಸ್ಯಾಂಡ್, ಜಲ್ಲಿ, ಗ್ರಾವೆಲ್ ದೊರೆಯುತ್ತದೆ.
ಸಂಪರ್ಕಿಸಿ:
ಪ್ರವೀಣ್‌ಕುಮಾರ್ ಎಸ್.ಕೆ.
90604 55766

**ಸೈಟುಗಳು ಮಾರಾಟಕ್ಕಿವೆ**
ಎಸ್.ಎಸ್. ಬಡಾವಣೆ 30x60 (ಉತ್ತರ), ಬಾಲಾಜಿ ಲೇಔಟ್‌ನಲ್ಲಿ 30x40 (ಉತ್ತರ ಪಶ್ಚಿಮ ಕಾರ್ನರ್), ಶಿವಕುಮಾರಸ್ವಾಮಿ ಬಡಾವಣೆಯಲ್ಲಿ 30x40 (ಪೂರ್ವ ದಕ್ಷಿಣ ಕಾರ್ನರ್), ಶಿವ ಪಾರ್ವತಿ ಲೇಔಟ್‌ನಲ್ಲಿ 40x60 (ಪೂರ್ವ)ಸರಸ್ವತಿ ನಗರದಲ್ಲಿ 30x50 (ಪೂರ್ವ), ಸಿದ್ದವೀರಪ್ಪ ಬಡಾವಣೆಯಲ್ಲಿ 40x50 (ಪೂರ್ವ), ಆಂಜನೇಯ ಬಡಾವಣೆಯಲ್ಲಿ 40x50 (ಉತ್ತರ) ಸೈಟುಗಳು ಮಾರಾಟಕ್ಕಿವೆ.
98804 40602

**ಡ್ರೈವರ್ ಬೇಕಾಗಿದ್ದಾರೆ**
APE/Maximo ಗಾಡಿ ಓಡಿಸಲು ಲೈಸನ್ಸ್ ಉಳ್ಳವರು ಬೇಕಾಗಿದ್ದಾರೆ. ಸಂಪರ್ಕಿಸಿ:
88619 45934

**ಬೇಕಾಗಿದ್ದಾರೆ**
ಪೋಲಾರ್ ಬೇರ್ ಐಸ್ ಕ್ರೀಂ ಪಾರ್ಲರ್ ನಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಕನಿಷ್ಠ ವೇತನ ರೂ.10,000/-
ಸಂಪರ್ಕಿಸಿ
99162 24801

**ಮನೆ ಬಾಡಿಗೆಗೆ ಇದೆ**
ಶಿವಕುಮಾರ ಸ್ವಾಮಿ, ಬಡಾವಣೆ, 1ನೇ ಹಂತ, 1ನೇ ಕ್ರಾಸ್, #1077/10 ರಲ್ಲಿ 3 ಬೆಡ್ ರೂಂ, ಕಾರ್ ಪಾರ್ಕಿಂಗ್ ಇರುವ 1ನೇ ಮಹಡಿ ಮನೆ ಬಾಡಿಗೆಗೆ ಇದೆ.
ಫೋ. : 97425 52737

**ಬೇಕಾಗಿದ್ದಾರೆ**
ರಿಸೆಪ್ಷನಿಸ್ಟ್ ಹುದ್ದೆಗೆ ಕಂಪ್ಯೂಟರ್ ಜ್ಞಾನವುಳ್ಳ ಮಹಿಳಾ ಅಭ್ಯರ್ಥಿಗಳು ಬೇಕಾಗಿದ್ದಾರೆ.
ಆಸಕ್ತರು ಸಂಪರ್ಕಿಸಿ:
ಲೋಟಸ್ ಆಯುರ್ವೇದಿಕ್ ಆಸ್ಪತ್ರೆ
ವಿದ್ಯಾನಗರ, ದಾವಣಗೆರೆ.
96322 84707

**ಮಳಿಗೆ ಬಾಡಿಗೆಗಿದೆ**
#1618, ಶಿವಾಲಿ ಟಾಕೀಸ್ ಎದುರು ಕೋರ್ಟ್ ಮೇನ್ ರೋಡ್, ಶಿವಾಲಿ ರಸ್ತೆ, ಜಾಲಿನಗರ, (ಸುರೇಶ್ ನಗರ)ದಲ್ಲಿ ಮಳಿಗೆ ಬಾಡಿಗೆಗಿದೆ. ಸಂಪರ್ಕಿಸಿ :
96324 77899

**ಮನೆ ಬಾಡಿಗೆಗೆ ಇದೆ**
ನೀರಿನ ಸೌಕರ್ಯವುಳ್ಳ, ಮೊದಲನೇ ಮಹಡಿಯಲ್ಲಿ 2 ಬೆಡ್ ರೂಂ ಮನೆ ಬಾಡಿಗೆಗೆ ದೊರೆಯುವುದಿದೆ. ಕುವೆಂಪು ನಗರದ ಲಕ್ಷ್ಮಿ ಫ್ಲೋರ್ ಮಿಲ್ ಎದುರಿಗೆ 3ನೇ ಕ್ರಾಸ್‌ನಲ್ಲಿದೆ ಬ್ರೋಕರ್‌ಗೆ ಅವಕಾಶವಿರುವುದಿಲ್ಲ.
99863 31471

**ಸೈಟು ಮಾರಾಟಕ್ಕಿವೆ**
ಸರಸ್ವತಿ ನಗರ 30x50, 40x60, ಭೂಮಿಕ 30x50, 30x40, DCM 40x40, 40x60 ಸೈಟು, ಸರಸ್ವತಿ ನಗರ 20x30 ಸೈಟು ಮಾರಾಟಕ್ಕಿವೆ. ಮನೆ ಮತ್ತು ಸೈಟುಗಳು ಮಾರಾಟಕ್ಕಿವೆ.
ಏಜೆಂಟ್ : ಶಾಂತಪ್ಪ ಪೂಜಾರಿ
ಫೋ. : 99647 29123

**ಮನೆ/ರೂಂ ಬಾಡಿಗೆಗೆ ಇದೆ**
ದಾವಣಗೆರೆಯ ವಿದ್ಯಾನಗರದಲ್ಲಿ ಮನೆಗಳು, ಸ್ಟೂಡೆಂಟ್ ರೂಂಗಳು ಬಾಡಿಗೆಗೆ ಇವೆ.
96322 74557

**ಕೌಶಲ್ಯ ತರಬೇತಿ**
ವೇದಾಂತ ಫೌಂಡೇಷನ್ ವತಿಯಿಂದ S.S.L.C., PUC ಮತ್ತು ಯಾವುದೇ ಡಿಗ್ರಿ ಪಾಸ್ ಆದ ವಿದ್ಯಾರ್ಥಿಗಳಿಗೆ ಅವರ ಶಿಕ್ಷಣಕ್ಕೆ ಅನುಗುಣವಾಗಿ ಸ್ಕಿಲ್ ಟ್ರೈನಿಂಗ್ ನೀಡಿ ಅವರಿಗೆ ಹೆಸರಾಂತ ಕಂಪನಿಗಳಲ್ಲಿ Job Placement (ಉದ್ಯೋಗ ಅವಕಾಶವನ್ನು) ಒದಗಿಸುತ್ತೇವೆ.
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
90667 66580, 85532 59527

**ಬೇಕಾಗಿದ್ದಾರೆ**
ಹರಿಹರದ ವೈನ್ ಶಾಪ್‌ಗಳಲ್ಲಿ ಕೆಲಸ ಮಾಡಲು ಕಂಪ್ಯೂಟರ್ ಬಿಲ್ಲಿಂಗ್ ಆಪರೇಟರ್, ಕ್ಯಾಷಿಯರ್, ವೆಂಡರ್, ಸಪ್ಲೈಯರ್ ಬೇಕಾಗಿದ್ದಾರೆ.
99726 98591

**ಸೈಟುಗಳು/ಹೊಲ ಮಾರಾಟಕ್ಕೆ**
ಬನಶಂಕರಿ ಲೇಔಟ್, ಜಯನಗರ, ಶಿವ-ಪಾರ್ವತಿ ಬಡಾವಣೆ 30x30, 30x50, 50x75, 40x60, ಸೈಟ್‌ಗಳು, ಮನೆ ಮತ್ತು ಹೊಲ, ಬಂಗ್ಲೆ ಸೈಟುಗಳು, ಅಪಾರ್ಟ್‌ಮೆಂಟ್ ಸೈಟುಗಳು ಯೋಗ್ಯ ಬೆಲೆಗೆ ದೊರೆಯುತ್ತವೆ.
ಅಭಿಷೇಕ್ ಅಫೇರ್, ಏಜೆಂಟ್
ಮೊ.97315 12365

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿ ಕೆಲಸಕ್ಕೆ ಅನುಭವ ಇರುವ ಹುಡುಗರು ಬೇಕಾಗಿದ್ದಾರೆ.
ಸಂಪರ್ಕಿಸಿ:
91647 52770

**ಮನೆ ಬಾಡಿಗೆಗೆ ಇದೆ**
ಎರಡನೇ ಫ್ಲೋರ್‌ನಲ್ಲಿರುವ ಸಿಂಗಲ್ ಬೆಡ್‌ರೂಂನ ಸುಸಜ್ಜಿತ ಮನೆ ಬಾಡಿಗೆಗೆ ಇದೆ. ಆಸಕ್ತರು ಸಂಪರ್ಕಿಸಿ: #83, ಲೇಬರ್ ಕಾಲೋನಿ (KHB ಕಾಲೋನಿ) 4ನೇ ಕ್ರಾಸ್, ನಾಟ್ಯ ಗಣಪತಿ ದೇವಸ್ಥಾನದ ಹತ್ತಿರ ನಿಟುವಳ್ಳಿ ರಸ್ತೆ, ದಾವಣಗೆರೆ.
99451 25173
78920 94954

**ರೂಂಗಳು ಬಾಡಿಗೆಗೆ ಇವೆ**
ಅಟ್ಯಾಚ್ ಬಾತ್ ರೂಂ ಸೌಕರ್ಯ ಇದೆ. ಸವಣೂರು ಬಾಬು ಆರ್ಕೇಡ್ ಲಾಯರ್ ರೋಡ್, ಪಿ.ಬಿ. ರೋಡ್ ಹತ್ತಿರ, ದಾವಣಗೆರೆ.
99002 60330


## ಶ್ರೀಮತಿ ಜಿ. ಕಮಲಮ್ಮ ನಿಧನ



ದಾವಣಗೆರೆ ಕುರುಬರಕೇರಿ ವಾಸಿ, ದಿ. ಗೌಡ್ರು ಶಂಕ್ರಪ್ಪ ಇವರ ಧರ್ಮಪತ್ನಿ
**ಶ್ರೀಮತಿ ಜಿ. ಕಮಲಮ್ಮ (78)**
ಅವರು ದಿನಾಂಕ 24.12.2020 ರ ಗುರುವಾರ ರಾತ್ರಿ 9.35 ಕ್ಕೆ ನಿಧನರಾಗಿದ್ದಾರೆ. , ಮೂವರು ಪುತ್ರರು, ಓರ್ವ ಪುತ್ರಿ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 25.12.2020ರ ಶುಕ್ರವಾರ ಮಧ್ಯಾಹ್ನ 2ಗಂಟೆಗೆ ನಗರದ ಬೂದಾಳ ರಸ್ತೆ ಸಾರ್ವಜನಿಕ ರುದ್ರಭೂಮಿಯಲ್ಲಿ ನೆರವೇರಲಿದೆ.
ಇಂತಿ ದುಃಖಿತಪ್ತರು:
78929 26866, 98444 43278


**WANTED**
Order Booking Boys (PUC)
A.K.TRADERS
Ashirwad, Bapuji Hospital Road, Davangere - 577004

**ಹಾಲ್ ಬಾಡಿಗೆಗಿದೆ**
800 sqft ಹಾಲ್, ಮೊದಲನೇ ಮಹಡಿ ಮಾಮಾಸ್ ಜಾಯಿಂಟ್ ರೋಡ್, ಎಂ.ಸಿ.ಸಿ. 'ಬಿ' ಬ್ಲಾಕ್,
94489 21346
82177 72482

**ಬೇಕಾಗಿದ್ದಾರೆ**
ಹೊಳಲ್ಕೆರೆ ತಾ|| ಅಡಿಕೆ ತೋಟದಲ್ಲಿ ಕೆಲಸ ಮಾಡಲು ಒಂದು ಕುಟುಂಬ ಬೇಕಾಗಿದೆ. ಕೂಡಲೇ ಸಂಪರ್ಕಿಸಿರಿ
94484 39639
63665 96479

**ಮನೆ ಲೀಸ್‌ಗೆ ಇದೆ**
ಬಾಲಾಜಿ ನಗರ (ಎಸ್.ಎಸ್. ಲೇಔಟ್), 2nd ಸ್ಟೇಜ್, 2 ಬೆಡ್‌ರೂಂ ಗ್ರೌಂಡ್ ಫ್ಲೋರ್ ಹಾಗೂ ಮೊದಲನೆ ಮಹಡಿಯಲ್ಲಿ 2 ಮನೆಗಳು ಲೀಸ್‌ಗೆ ಇವೆ. ಬೋರ್‌ವೆಲ್/ಮುನ್ಸಿಪಲ್ ನೀರು, ಸೋಲಾರ್ ವ್ಯವಸ್ಥೆ ಇದೆ. ಸಂಪರ್ಕಿಸಿ:
80506 21189


## 24ನೇ ವರ್ಷದ ಚಿರಸ್ಮರಣೆ



ದಿ. ಶ್ರೀ ವರವಿನ ಭೀಮಪ್ಪ 25.12.1996



ದಿ. ಶ್ರೀಮತಿ ವರವಿನ ಕೆಂಚಮ್ಮ 19.04.2002

*ನೀವು ನಮ್ಮಿಂದ ದೂರವಾಗಿ 24 ವರ್ಷಗಳು, ನಿಮ್ಮಗಳ ನೆನಪು ಹಚ್ಚ ಹಸಿರಿನಂತಿದೆ. ನಿಮ್ಮ ಪ್ರೀತಿ, ಮಮತೆ, ವಾತ್ಸಲ್ಯಮಯ ಜೀವನವೇ ನಮ್ಮೆಲ್ಲರ ಬದುಕಿಗೆ ಶಕ್ತಿ ಚೈತನ್ಯ. ನಿಮ್ಮಗಳ ಸವಿನೆನಪು ಮರೆಯಲಾರೆವು ನಿಮ್ಮಗಳ ಆಶೀರ್ವಾದವೇ ನಮಗೆ ದಾರಿದೀಪ ನಿಮ್ಮ ಆತ್ಮಕ್ಕೆ ಆ ಭಗವಂತನು ಚಿರಶಾಂತಿ ನೀಡಲೆಂದು ಪ್ರಾರ್ಥಿಸುವ....*

***ನಿಮ್ಮ ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು, ಮರಿಮೊಮ್ಮಕ್ಕಳು ಬಂಧುಗಳು ಹಾಗೂ ವರವಿನ ವಂಶಸ್ಥರು, ಮತ್ತಿ, ದಾವಣಗೆರೆ ತಾಲ್ಲೂಕು.***


**ಸುವರ್ಣಾವಕಾಶ**
ಯುವಕ/ ಯುವತಿಯರಿಗೆ, ವಿದ್ಯಾರ್ಥಿಗಳಿಗೆ, ನಿರುದ್ಯೋಗಿಗಳಿಗೆ, ಗೃಹಿಣಿಯರಿಗೆ, ಉದ್ಯೋಗಸ್ಥರಿಗೆ ಯಾವುದೇ ಬಂಡವಾಳವಿಲ್ಲದೆ ನಿಮ್ಮ ಬಿಡುವಿನ ವೇಳೆಯಲ್ಲಿ ತಿಂಗಳಿಗೆ 25 ಸಾವಿರದಿಂದ 1 ಲಕ್ಷದವರೆಗೆ ಗಳಿಸುವ ನಿಮ್ಮ ಕನಸುಗಳನ್ನು ನನಸು ಮಾಡಿಕೊಳ್ಳುವ ಅದ್ಭುತ ಸುವರ್ಣಾವಕಾಶ ಸಂಪರ್ಕಿಸಿ:
93435 46891, 70194 26891

**Simple vaastu**
ಸಿಂಪಲ್ ವಾಸ್ತು
98444 88838

ಓಂ ಶ್ರೀ ಮಹಾಂಕಾಳಿ ಜ್ಯೋತಿಷ್ಯಫಲಂ
ಪಂ ಶ್ರೀ ರಾಮ್ ಭಟ್
ನುಡಿದಂತೆ ನಡೆಯುವ ಏಕೈಕ ಜೋಗಿ ಜಂಗಮರ ಭಿಕ್ಷಾಟನೆ ರೂಪದಲ್ಲಿ ನಿಮ್ಮ ಸ್ವರದಿಂದ ಪೂರ್ಣಾಂಶ ಮನಸಿದ್ದಿ ಭವಿಷ್ಯವನ್ನು ನುಡಿಯುವರು. ನಿಮ್ಮ ಸಮಸ್ಯೆಗೆ ಪರಿಹಾರ ಶತಸಿದ್ಧ. ಇಂದೇ ಕರೆ ಮಾಡಿ.
ಮೊ: 91646 26701

**Mayur Consultancy Services**
- Constructions
- Building Plans
- Approval Drawings
- Estimates
- 3D Elevations
- Simple Vaastu
Er. Mayur H N
B.E. (Civil), MBA, M.Tech, MIE
98444 88838


## ಮಹಾನಗರ ಪಾಲಿಕೆ ಕಾರ್ಯಾಲಯ, ದಾವಣಗೆರೆ.


### ಪ್ರಕಟಣೆ

ದಾವಣಗೆರೆ ಮಹಾನಗರ ಪಾಲಿಕೆಯ ಕೇಂದ್ರ ಸರ್ಕಾರದ ಸ್ವಚ್ಛ ಭಾರತ್ ಮಿಷನ್ ಯೋಜನೆ ಅಡಿಯಲ್ಲಿ ಈಗಾಗಲೇ ವಾಣಿಜ್ಯ/ಮಾರುಕಟ್ಟೆ ಮತ್ತು ಸಾರ್ವಜನಿಕ ಪ್ರದೇಶಗಳಲ್ಲಿ ಸಾರ್ವಜನಿಕ ಶೌಚಾಲಯಗಳನ್ನು ಹಾಗೂ ಕೊಳಗೇರಿ ಪ್ರದೇಶಗಳಲ್ಲಿ ಸಾರ್ವಜನಿಕರು ಬಯಲಿನಲ್ಲಿ ಶೌಚಕ್ಕೆ ತೆರಳದಂತೆ ಸಮುದಾಯ ಶೌಚಾಲಯಗಳನ್ನು ಎಲ್ಲಾ ಸೌಲಭ್ಯಗಳೊಂದಿಗೆ ಅಂದರೆ ನೀರಿನ ವ್ಯವಸ್ಥೆ, ಒಳಚರಂಡಿ ಸಂಪರ್ಕ, ವಿದ್ಯುತ್ ಸಂಪರ್ಕ ಇತ್ಯಾದಿ ವ್ಯವಸ್ಥೆಯೊಂದಿಗೆ ಸಾರ್ವಜನಿಕ ಅನುಕೂಲಕ್ಕಾಗಿ ನಿರ್ಮಿಸಲಾಗಿದ್ದು, ಹಾಗೂ ವೈಯಕ್ತಿಕವಾಗಿ ಸಾರ್ವಜನಿಕರು ತಮ್ಮ ಮನೆಗಳಲ್ಲಿ ವೈಯಕ್ತಿಕವಾಗಿ ಶೌಚಾಲಯಗಳನ್ನು ಕಟ್ಟಿಸಿಕೊಳ್ಳಲು ಸದರಿ ಯೋಜನೆ ಮೂಲಕ ಫಲಾನುಭವಿಗಳಿಗೆ ಸಹಾಯ ಧನವನ್ನು ನೀಡಿ ಪ್ರೋತ್ಸಾಹಿಸಲಾಗಿದ್ದು, ಅರ್ಹ ಫಲಾನುಭವಿಗಳು ವೈಯಕ್ತಿಕ ಶೌಚಾಲಯಗಳನ್ನು ಸಂಪೂರ್ಣವಾಗಿ ನಿರ್ಮಿಸಿಕೊಂಡಿರುತ್ತಾರೆ. ಪಾಲಿಕೆಯು ಸ್ವಚ್ಛಭಾರತ್ ಮಿಷನ್ ಯೋಜನೆಯ ODF+ (Open Defecation Free Plus) ಪ್ರಮಾಣೀಕರಣಕ್ಕೆ ಅವಶ್ಯವಿರುವ ಎಲ್ಲಾ ಮಾನದಂಡಗಳನ್ನು ಅನುಸರಿಸಿರುವ ಕಾರಣ ನಗರವನ್ನು ODF+ಎಂದು ಘೋಷಿಸಲು ಸಾರ್ವಜನಿಕ ಪ್ರಕಟಣೆ ಹೊರಡಿಸುವ ನಿಟ್ಟಿನಲ್ಲಿ, ಸಾರ್ವಜನಿಕರಿಂದ ಸಂಘ ಸಂಸ್ಥೆಗಳಿಂದ ಸಲಹೆ ಸೂಚನೆಗಳು ಆಕ್ಷೇಪಣೆಗಳು ಇದ್ದಲ್ಲಿ ಆರೋಗ್ಯ ಶಾಖೆ, ಮಹಾನಗರ ಪಾಲಿಕೆ ಕಾರ್ಯಾಲಯ, ರೈಲ್ವೆ ನಿಲ್ದಾಣ ಎದುರು, ಪಿ.ಬಿ. ರಸ್ತೆ, ದಾವಣಗೆರೆ ಈ ಕಛೇರಿಗೆ ಲಿಖಿತ ರೂಪದಲ್ಲಿ ದಿನಾಂಕ: 06.01.2021 ರೊಳಗಾಗಿ ಸಲ್ಲಿಸಲು ಕೋರಿದೆ.

ವಾಸಾಇ/ದಾವಣಗೆರೆ/534/ಎಂಸಿಎ/2020–21

ಸಹಿ/– ಆಯುಕ್ತರು,
ಮಹಾನಗರ ಪಾಲಿಕೆ, ದಾವಣಗೆರೆ

## ಹನ್ನೆರಡನೇ ವರ್ಷದ ಪುಣ್ಯ ಸ್ಮರಣೆ



**ದಿ|| ಬಿ. ಓಂಕಾರಪ್ಪನವರು**
**ಸ್ವಾತಂತ್ರ್ಯ ಹೋರಾಟಗಾರರು ಹಾಗೂ ರೈಲ್ವೆ ಸತ್ಯಾಗ್ರಹಿಗಳು ಹನುಮನಹಳ್ಳಿ.**

ನೀವು ನಮ್ಮನ್ನಗಲಿ ಇಂದಿಗೆ 12 ವರ್ಷಗಳಾದವು.
ಸಾಮಾನ್ಯ ರೈತ ಕುಟುಂಬದಲ್ಲಿ ಜನಿಸಿ, ಒಬ್ಬ ದಾರ್ಶನಿಕನಂತೆ ನೀವು ಬದುಕಿದಿರಿ. ಧೃತಿಗೆಡದೆ ನೀವು ಆಂಗ್ಲರ ವಿರುದ್ಧ ಹೋರಾಡಿದಿರಿ, ರಾಷ್ಟ್ರಪ್ರೇಮ ಮೆರೆದ ನಿಮ್ಮ ದೇಶಭಕ್ತಿ, ಕೆಚ್ಚೆದೆಯ ಹೋರಾಟಗಳು, ನಿಮ್ಮ ತಾಳ್ಮೆ, ಸಹನೆ, ಪ್ರತಿಯೊಂದು ಹೆಜ್ಜೆಯೂ ನಮಗೆಲ್ಲಾ ಎಂದೆಂದಿಗೂ ಸ್ಫೂರ್ತಿ, ನಿಮ್ಮ ಪ್ರೀತಿಯ ನೆನಪೇ ನಮ್ಮ ಮನಸ್ಸಿಗೆ ಸಮಾಧಾನ.
ಎಂದೆಂದಿಗೂ ಸದಾ ನಿಮ್ಮ ಸ್ಮರಣೆಯಲ್ಲಿರುವ ದುಃಖಿತಪ್ತರು...
**ಪತ್ನಿ-ಕಮಲಾಕ್ಷಮ್ಮ ಮತ್ತು ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗದವರು.**

# ಕೂಡ್ಲಿಗಿ: ಜ. 6 ರಿಂದ ಜಾನುವಾರು-ಕುರಿ ಸಂತೆ



ಕೂಡ್ಲಿಗಿ, ಡಿ.24- ಪಟ್ಟಣದಲ್ಲಿ ಬರುವ ಜನವರಿ 6ರ ಬುಧವಾರದಂದು ಜಾನುವಾರು ಹಾಗೂ ಕುರಿಗಳ ನೂತನ ಮಾರುಕಟ್ಟೆ ಉದ್ಘಾಟನೆಗೊಳ್ಳಲಿದೆ.

ಪಟ್ಟಣದ ಶ್ರೀ ಕೊತ್ತಲಾಂಜನೇಯ ದೇವಸ್ಥಾನದಲ್ಲಿ ಯುವ ದಲ್ಲಾಳಿಗಳು ಪೂಜೆ ಸಲ್ಲಿಸಿ, ಮಾರುಕಟ್ಟೆ ಪ್ರಚಾರದ ಭಿತ್ತಿ ಪತ್ರಗಳನ್ನು ಹಂಚಲು ಪ್ರಾರಂಭಿಸಿದ್ದಾರೆ. ಮಾರುಕಟ್ಟೆಯನ್ನು ಶಾಸಕ ಎನ್.ವೈ. ಗೋಪಾಲಕೃಷ್ಣ ಉದ್ಘಾಟಿಸಲಿದ್ದಾರೆ.

**ಪ್ರತಿ ಬುಧವಾರ ಮಾರುಕಟ್ಟೆ:** ಪಟ್ಟಣದ ಬೆಂಗಳೂರು ರಸ್ತೆಯ ಶ್ರೀ ಕೊತ್ತಲಾಂಜನೇಯ ಬಯಲಿನಲ್ಲಿ ಪ್ರತಿ ಬುಧವಾರ ಬೆಳಿಗ್ಗೆ 6.30 ರಿಂದ ಸಂತೆ ಮಾರುಕಟ್ಟೆ ಆರಂಭಗೊಳ್ಳಲಿದೆ. ತಾಲ್ಲೂಕು, ಪಟ್ಟಣ ಹಾಗೂ ನೆರೆ ಹೊರೆ ತಾಲ್ಲೂಕಿನ ದಲ್ಲಾಳಿಗಳು ಹಾಗೂ ರೈತರು ಸದುಪಯೋಗ ಪಡೆದುಕೊಳ್ಳಬಹುದೆಂದು ಹಿರಿಯ ದಲ್ಲಾಳಿಗಳಾದ ಕಾಯಿಕೆಡವ ಶರಣಜ್ಜ, ಕರೆಪನ್ನಯ್ಯನವರ ಕೊತ್ಲಪ್ಪ, ದಲ್ಲಾಳಿ ಚೌಡಪ್ಪ, ಬೇಲ್ದಾರ್ ಹುಸೇನ್ ಸಾಬ್, ಮಾಳ್ಗಿ ನಾಗರಾಜ, ಎಂ. ಅಂಜಿಪುಟ್ಟಿ, ಮಲ್ಲಾಪುರದ ನಾಗರಾಜ, ಅಜ್ಜಯ್ಯ, ಕುರುಬರ ಬಸವರಾಜ, ಬಶೀರ್ ರಾಘವೇಂದ್ರ ಕೋರಿದ್ದಾರೆ.

ಈ ಸಂದರ್ಭದಲ್ಲಿ ಹಿರಿಯರಾದ ತಿಮ್ಮಪ್ಪ, ಎಸ್. ದುರುಗೇಶ್, ಮಂಜುನಾಥ, ಹೊನ್ನೇಶ, ಅಂಬಾಲಿ ನಾಗರಾಜ, ಶಿವಮೂರ್ತಿ, ಡಿ.ಕೆ.ಬಿ. ರಾಜು, ವೀರೇಶ್, ಓಬಳೇಶ್ ಮತ್ತಿತರರಿದ್ದರು.

# ಕೇಂದ್ರಗಳಲ್ಲಿ 24x7 ಸೇವೆಯನ್ನು ನೀಡಲು ಕ್ರಮ

**(1ನೇ ಪುಟದಿಂದ)** ಅಗತ್ಯವಾದ ಹಣವನ್ನು ಮುಂದಿನ ಮುಂಗಡ ಪತ್ರದಲ್ಲಿ ಭರಿಸುವುದಾಗಿಯು ಅವರು ಹೇಳಿದ್ದಾರೆ.

ಗ್ರಾಮೀಣ ಪ್ರದೇಶದಲ್ಲಿರುವ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಮೂಲ ಸೌಕರ್ಯ ಕಲ್ಪಿಸಲಾಗುವುದು. ಇನ್ನು ಮುಂದೆ ಎರಡು ಎಕರೆ ಪ್ರದೇಶದಲ್ಲಿ ಈ ಕೇಂದ್ರಗಳನ್ನು ಸ್ಥಾಪಿಸಿ, ಪ್ರಸ್ತುತ 6 ಹಾಸಿಗೆಗಳಿಂದ 20 ಹಾಸಿಗೆಗಳಿಗೆ ಹೆಚ್ಚಿಸಲಾಗುವುದು.

ಪ್ರತಿ ಕೇಂದ್ರಕ್ಕೂ ಮೂವರು ವೈದ್ಯರು, ಅಲ್ಲದೆ ಅಗತ್ಯ ಸಿಬ್ಬಂದಿಗಳನ್ನು ನೇಮಿಸಲಾಗುವುದು, ಕೇರಳ, ತಮಿಳುನಾಡು ಮಾದರಿಯಲ್ಲೇ ಎಲ್ಲಾ ರೀತಿಯ ಸೇವೆಗಳು ಈ ಕೇಂದ್ರದಲ್ಲಿ ದೊರೆಯಲಿವೆ ಮತ್ತು ರಕ್ತ ಪರೀಕ್ಷೆಗೂ ಅವಕಾಶ ಮಾಡಿಕೊಡಲಾಗುವುದು ಎಂದರು.

ಜಿಲ್ಲಾಸ್ಪತ್ರೆಗಳಿಗೆ ಸೇವೆಗಳಿಗೆ ಅಲೆದಾಡುವುದನ್ನು ತಪ್ಪಿಸುವ ಉದ್ದೇಶದಿಂದ ಇಂತಹ ಕ್ರಮ ಕೈಗೊಳ್ಳಲಾಗುತ್ತಿದೆ. ಕೋವಿಡ್ ಕಾರಣ ಆಸ್ಪತ್ರೆಗಳಲ್ಲಿ ಸ್ವಚ್ಛತೆಗೆ ಆದ್ಯತೆ ಹಾಗೂ ಕೋವಿಡ್ ಚಿಕಿತ್ಸೆಗೆ ಪೂರಕ ಸಲಕರಣೆ ಹಾಗೂ ಔಷಧ ಪೂರೈಕೆ ಮಾಡಲಾಗುವುದು.

ಕೋವಿಡ್‌ನ ಎರಡನೇ ಅಲೆ ಹೊಸ ಸ್ವರೂಪದಲ್ಲಿ ಕಾಣಿಸಿಕೊಳ್ಳುತ್ತಿದ್ದು, ಅದರ ನಿಯಂತ್ರಣಕ್ಕೆ ಆಸ್ಪತ್ರೆಗಳು ಸಜ್ಜಾಗಬೇಕಾಗಿದೆ. ಇದಕ್ಕೆ ಪೂರಕವಾಗಿ ಎಲ್ಲಾ ರೀತಿಯ ಸಹಕಾರವನ್ನು ಸರ್ಕಾರ ನೀಡಲಿದೆ ಎಂದರು.

ಇದೇ ಸಂದರ್ಭದಲ್ಲಿ ಮಾತನಾಡಿದ, ಆರೋಗ್ಯ ಸಚಿವ ಡಾ. ಕೆ. ಸುಧಾಕರ್, ನಮ್ಮ ರಾಜ್ಯದಲ್ಲೂ ಕೂಡಾ ದೇಶಕ್ಕೆ ಮಾದರಿಯಾಗುವ ಆರೋಗ್ಯ ವ್ಯವಸ್ಥೆ ಕಲ್ಪಿಸಬೇಕೆಂದು ಪ್ರತಿ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು 6 ರಿಂದ 8 ಕೋಟಿ ರೂ. ವೆಚ್ಚದಲ್ಲಿ ಮೇಲ್ದರ್ಜೆಗೇರಿಸಲಾಗುವುದು. ಪ್ರತಿ ಕೇಂದ್ರದಲ್ಲಿ ಇನ್ನುಮುಂದೆ ಆಂಬ್ಯುಲೆನ್ಸ್ ವ್ಯವಸ್ಥೆ ಇರುತ್ತದೆ. ವೈದ್ಯರು ಮತ್ತು ಸಿಬ್ಬಂದಿ ಉಳಿದುಕೊಳ್ಳಲು ಅಲ್ಲಿಯೇ ವಸತಿ ವ್ಯವಸ್ಥೆ ಕಲ್ಪಿಸುವುದಾಗಿಯು ತಿಳಿಸಿದರು.

## ಕೊರೊನಾ ಕತ್ತಲ ಕಳೆ ದೇವಕುಮಾರ

**(1ನೇ ಪುಟದಿಂದ)** ತುಂಬಿದ ಸಮಾಜಕ್ಕೆ ಸಮಾಧಾನ ಸಿಗಲಿ ಎಂಬುದೇ ಈ ಬಾರಿಯ ಕ್ರಿಸ್‌ಮಸ್ ಆಚರಣೆಯ ಸಂದೇಶವಾಗಿದೆ ಎಂದವರು ತಿಳಿಸಿದರು. ನಾಳೆ ಕ್ರಿಸ್‌ಮಸ್ ದಿನ ಬೆಳಿಗ್ಗೆ 9 ಗಂಟೆಗೆ ಆರಾಧನೆಯನ್ನು ಕೈಗೊಳ್ಳಲಾಗುವುದು. ಕೊರೊನಾ ಹಿನ್ನೆಲೆಯಲ್ಲಿ ಅಂತರ ಕಾಯ್ದುಕೊಳ್ಳಲು ಭಕ್ತರು ಸಾಧ್ಯವಾದಷ್ಟು ಚರ್ಚ್ ಹೊರಗಡೆ ಇರುವಂತೆ ನೋಡಿಕೊಳ್ಳಲಾಗುವುದು. ಹೊಸ ವರ್ಷಾಚರಣೆಯ ದಿನವೂ ಸಹ ಆರಾಧನೆ ಸರಳವಾಗಿರಲಿದೆ ಎಂದವರು ಹೇಳಿದರು.

ನಗರದ ಜಯನಗರದಲ್ಲಿರುವ ಡಿ.ಹೆಚ್.ಎಂ. ಚರ್ಚ್ ಸೇರಿದಂತೆ ಹಲವಾರು ಚರ್ಚ್‌ಗಳಲ್ಲಿ ಸಾಮಾಜಿಕ ಅಂತರದೊಂದಿಗೆ ಪ್ರವಚನ, ಕೀರ್ತನೆ ಹಾಗೂ ಆರಾಧನೆಗೆ ವ್ಯವಸ್ಥೆ ಮಾಡಲಾಗಿದೆ. ಕೊರೊನಾ ಹಿನ್ನೆಲೆಯಲ್ಲಿ ಚರ್ಚ್ ಒಳಗೆ ಹತ್ತು ವರ್ಷದೊಳಗಿನವರು ಹಾಗೂ 60 ವರ್ಷ ಮೀರಿದವರು ಮತ್ತು ಗರ್ಭಿಣಿಯರು ಬರಬಾರದು ಎಂದು ತಿಳಿಸಲಾಗಿದೆ ಎಂದು ಡಿ.ಹೆಚ್.ಎಂ. ಚರ್ಚ್‌ನ ಫಾಸ್ಟರ್ ರಾಜಶೇಖರ್ ತಿಳಿಸಿದ್ದಾರೆ.

## ಮಾಸ್ಕ್ ಹಾಕಿದ್ದರೂ ದಂಡ: ದೂರು

**(1ನೇ ಪುಟದಿಂದ)** ಆಡಳಿತಾರೂಢ ಬಿಜೆಪಿಯ ಶಾಸಕ ಎಂ.ಪಿ. ಕುಮಾರ ಸ್ವಾಮಿ ಅವರು ಗೃಹ ಸಚಿವ ಬಸವರಾಜ ಬೊಮ್ಮಾಯಿಗೆ ಪತ್ರ ಬರೆದಿದ್ದಾರೆ. ಶಾಸಕರ ಭವನಕ್ಕೆ ಬಾಡಿಗೆ ಕಾರಿನಲ್ಲಿ ತೆರಳುತ್ತಿರುವಾಗ ಶೇಷಾದ್ರಿಪುರಂ ಪೊಲೀಸ್ ಠಾಣೆಯ ಬಳಿ ತಮ್ಮನ್ನು ತಡೆಯಲಾಯಿತು. ಬಲವಂತವಾಗಿ ಕಾರಿನ ಗಾಜುಗಳನ್ನು ಇಳಿಸಿ ಮಾಸ್ಕ್ ಧರಿಸಿದ್ದರೂ 250 ರೂ.ಗಳ ದಂಡ ವಿಧಿಸಲಾಗಿದೆ ಎಂದು ಮೂಡಿಗೆರೆ ಶಾಸಕ ಪತ್ರದಲ್ಲಿ ಹೇಳಿದ್ದಾರೆ. ಗುರುವಾರ ಮಧ್ಯಾಹ್ನ 12.30ರ ಸಮಯದಲ್ಲಿ ಈ ಘಟನೆ ನಡೆದಿದೆ. ಈ ಘಟನೆಯಿಂದ ಮುಜುಗರಕ್ಕೀಡಾಗಿ ಯಾವುದೇ ವಾದ ಮಾಡದೇ ದಂಡ ಕಟ್ಟಿದ್ದೇನೆ ಎಂದು ಕುಮಾರಸ್ವಾಮಿ ತಿಳಿಸಿದ್ದಾರೆ.

ಅನಗತ್ಯವಾಗಿ ನನ್ನ ಮೇಲೆ ದಂಡ ವಿಧಿಸಿರುವ ಪೊಲೀಸ್ ಸಿಬ್ಬಂದಿಯ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು ಎಂದವರು ಆಗ್ರಹಿಸಿದ್ದಾರೆ.


**ಸುವರ್ಣಾವಕಾಶ**
ಎಸ್ಸೆಸ್ಸೆಲ್ಸಿ, ಪಿಯುಸಿ, ಫೇಲಾದವರು ನೇರ ಬಿ.ಎ., ಎಂ.ಎ., ಬಿ.ಕಾಂ., ಎಂ.ಕಾಂ., ಬಿ.ಎಸ್ಸಿ., ಬಿ.ಎಡ್., ಎಂ.ಎಡ್., ಡಿಪ್ಲೋಮಾ, ಬಿ.ಟೆಕ್, ಎಂ.ಟೆಕ್ ಮುಂತಾದ ಕೋರ್ಸ್‌ಗಳನ್ನು ಪಾಸ್ ಮಾಡಲು ಸಂಪರ್ಕಿಸಿ
8296265995, 8971684391
ಬೆಳಿಗ್ಗೆ 10 ರಿಂದ ಸಂಜೆ 6 ರೊಳಗೆ

**ಬೇಕಾಗಿದ್ದಾರೆ**
ಮಾರ್ಕೆಟಿಂಗ್ ಮಾಡಲು ಹುಡುಗರು ಬೇಕಾಗಿದ್ದಾರೆ.
ಸಂಪರ್ಕಿಸಿ
98441 20003

**ಶ್ರೀ ಸಾಯಿಬಾಲಾಜಿ ಜ್ಯೋತಿಷ್ಯಾಲಯ**
ಪಂಡಿತ್ ಸಾಯಿನಾಥ್ ಕುಡ್ಲ
ಇವರು ನಿಮ್ಮ ಜೀವನದ ಸಂಪೂರ್ಣ ಭವಿಷ್ಯವನ್ನು ಹೇಳುತ್ತಾರೆ. ವಿದ್ಯೆ, ಉದ್ಯೋಗ, ಮಾಟ-ಮಂತ್ರ, ವಶೀಕರಣ, ಸಾಲಬಾಧೆ ಇನ್ನೂ ನಿಮ್ಮ ಯಾವುದೇ ಗುಪ್ತ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ. ವಿಳಾಸ: ವಿದ್ಯಾನಗರ 1ನೇ ಬಸ್ ಸ್ಟಾಪ್ ಹತ್ತಿರ, ಕೆನರಾ ಬ್ಯಾಂಕ್ ಪಕ್ಕ, ದಾವಣಗೆರೆ.
ಮೊ: 95919 84627

**ಭೂಮಿಕ ಮ್ಯಾಟ್ರಿಮೊನಿ**
ಲಿಂಗಾಯತ ವಧು-ವರರ ಕೇಂದ್ರ
BIET ರೋಡ್ ಹೇಮಾವತಿ ಹಾಸ್ಟೆಲ್ ಹತ್ತಿರ, ದಾವಣಗೆರೆ.
www.bhoomikamatrimony.com
90080 55813

**ಮಾಂತ್ರಿಕ ಮೋಡಿ ಬೆಟ್ಟಪ್ಪ**
ನಂ.1 ವಶೀಕರಣ ಸ್ಪೆಷಲಿಸ್ಟ್
ಸ್ತ್ರೀ-ಪುರುಷ ವಶೀಕರಣ, ಗುಪ್ತ ಲೈಂಗಿಕ ದಾಂಪತ್ಯ ಸಮಸ್ಯೆ, ಇಷ್ಟಪಟ್ಟವರು ನಿಮ್ಮಂತಾಗಲು ಶೀಘ್ರದಲ್ಲಿ ಪರಿಹಾರ ಮಾಡುತ್ತಾರೆ. ಫೋನ್ ಮೂಲಕ ಸಂಪರ್ಕಿಸಿ: ಗಾಂಧಿ ಸರ್ಕಲ್, ದಾವಣಗೆರೆ.
89716 99826

**WANTED LADY TEACHERS**
B.Sc., B.Ed (PCM) - 01
B.Sc. B.Ed (CBZ) - 01
BA., BEd.,- 02
Clerk B.Com with Computer Knowledge. Aya-01
Immediately Contact to
Dr. Veeresh Biradar, Secretary
Vinayaka Convent, Ganesh Pet, Davangere. Ph. : 95356 10817

**ತಕ್ಷಣ ಬೇಕಾಗಿದ್ದಾರೆ**
ಸಪ್ಲೈಯರ್ಸ್, ಕ್ಲೀನಿಂಗ್, ಕುಕ್
ಸಂಪರ್ಕಿಸಿ:
93803 84168

**WORK FROM HOME**
joining pakage 1000 Rs and earn daily 1000 to 5000 above during ur free time, note internet knowledge must, send ur name and place throw whatsapp
80955 70649, 85537 99368


## ಮೋಟಾರು ಬೈಕ್‌ಗಳ ನಡುವೆ ಡಿಕ್ಕಿ : ಕಬ್ಬೂರು ಸವಾರನ ಸಾವು

ದಾವಣಗೆರೆ, ಡಿ.24- ಎರಡು ಮೋಟಾರ್ ಬೈಕ್ ಗಳ ನಡುವೆ ಡಿಕ್ಕಿ ಸಂಭವಿಸಿದ ಪರಿಣಾಮ ಓರ್ವ ಸವಾರ ಮೃತಪಟ್ಟಿರುವ ಘಟನೆ ಹದಡಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

ತಾಲ್ಲೂಕಿನ ಕಬ್ಬೂರು ಗ್ರಾಮದ ಕೂಲಿ ಕಾರ್ಮಿಕ ಮಂಜುನಾಥ ಅಲಿಯಾಸ್ ಮಂಜಪ್ಪ (30) ಮೃತ ಸವಾರ. ಈತ ನಗರದ ಗಡಿಯಾರ ಕಂಬದ ಹತ್ತಿರದ ಕಿರಾಣಿ ಅಂಗಡಿಯೊಂದರಲ್ಲಿ ಕೆಲಸ ಮಾಡುತ್ತಿದ್ದ. ಎಂದಿನಂತೆ ಬುಧವಾರ ಕೆಲಸ ಮುಗಿಸಿಕೊಂಡು ರಾತ್ರಿ ಕಬ್ಬೂರು ಗ್ರಾಮಕ್ಕೆ ಬೈಕ್ ನಲ್ಲಿ ತೆರಳುತ್ತಿದ್ದಾಗ, ಕುರ್ಕಿ ಗ್ರಾಮದ ಬಳಿಯ ಸಾಯಿ ಬಾಬಾ ದೇವಸ್ಥಾನದ ಹತ್ತಿರ ಎದುರಿನಿಂದ ಬಂದ ಮತ್ತೊಂದು ಬೈಕ್ ನ ಸವಾರ ರತನ್ ಎಂಬಾತ ಡಿಕ್ಕಿ ಪಡಿಸಿದ್ದು, ಇದರಿಂದ ಮಂಜಪ್ಪನ ತಲೆಗೆ ತೀವ್ರವಾಗಿ ಪೆಟ್ಟಾಗಿ ಚಿಕಿತ್ಸೆಗಾಗಿ ಆಸ್ಪತ್ರೆಗೆ ಸಾಗಿಸುವಾಗ ಮಾರ್ಗ ಮಧ್ಯೆ ಮೃತಪಟ್ಟಿದ್ದಾನೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

## ಯಕ್ಕನಹಳ್ಳಿ ಬಳಿ ರಸ್ತೆ ಅಪಘಾತದಲ್ಲಿ ಯುವಕನ ಸಾವು

ದಾವಣಗೆರೆ, ಡಿ.24- ಲಾರಿ ಡಿಕ್ಕಿ ಹೊಡೆದು ಮೇಲೆ ಹರಿದ ಪರಿಣಾಮ ಬೈಕ್ ಸವಾರನೋರ್ವ ಸ್ಥಳದಲ್ಲೇ ಧಾರುಣವಾಗಿ ಸಾವನ್ನಪ್ಪಿರುವ ಘಟನೆ ಹೊನ್ನಾಳಿ ತಾಲ್ಲೂಕಿನ ಯಕ್ಕನಹಳ್ಳಿ ಗ್ರಾಮದಲ್ಲಿನ ತಿಮ್ಲಾಪುರ - ಯಕ್ಕನಹಳ್ಳಿ ಗ್ರಾಮದ ನಡುವಿನ ರಸ್ತೆಯಲ್ಲಿಂದು ಮಧ್ಯಾಹ್ನ ನಡೆದಿದೆ.

ಯಕ್ಕನಹಳ್ಳಿ ಗ್ರಾಮದ ಕೂಲಿ ಕಾರ್ಮಿಕ ಮಂಜುನಾಥ (30) ಮೃತ ದುರ್ದೈವಿ. ಕುಂದೂರು ಗ್ರಾಮಕ್ಕೆ ಬೈಕ್ ನಲ್ಲಿ ಬಂದಿದ್ದ ಈತ ವಾಪಸ್ ತನ್ನ ಗ್ರಾಮಕ್ಕೆ ತೆರಳುತ್ತಿರುವಾಗ ತಿಮ್ಲಾಪುರ ಕಡೆಯಿಂದ ಬಂದ ಮಣ್ಣು ತುಂಬಿದ್ದ ಲಾರಿ ಡಿಕ್ಕಿ ಹೊಡೆದಿದೆ. ಇದರಿಂದ ಮಂಜುನಾಥ ಬೈಕ್ ಸಮೇತ ರಸ್ತೆಯ ಮೇಲೆ ಬಿದ್ದಿದ್ದು, ಆಗ ಲಾರಿಯ ಹಿಂದಿನ ಚಕ್ರಗಳು ಈತನ ತಲೆಯ ಮೇಲೆ ಹರಿದ ಪರಿಣಾಮ ಸ್ಥಳದಲ್ಲಿಯೇ ಮೃತಪಟ್ಟಿದ್ದಾನೆ.

ಅಪಘಾತವಾಗುತ್ತಿದ್ದಂತೆ ಲಾರಿಯನ್ನು ಚಾಲಕ ಸ್ಥಳದಲ್ಲಿಯೇ ಬಿಟ್ಟು ಓಡಿ ಹೋಗಿದ್ದಾನೆ.

## ದೊಣೆಹಳ್ಳಿ ಬಳಿ ಅಪಘಾತ ಹಬ್ಬಕ್ಕಾಗಮಿಸುತ್ತಿದ್ದ ವ್ಯಕ್ತಿಯ ಸಾವು

ದಾವಣಗೆರೆ, ಡಿ.24- ಲಾರಿ ಡಿಕ್ಕಿ ಹೊಡೆದ ಪರಿಣಾಮ ರಾಷ್ಟ್ರೀಯ ಹೆದ್ದಾರಿಯಲ್ಲಿ ರಸ್ತೆ ದಾಟುತ್ತಿದ್ದ ವ್ಯಕ್ತಿಯೋರ್ವ ಸ್ಥಳದಲ್ಲೇ ಸಾವಿಗೀಡಾಗಿರುವ ಘಟನೆ ಜಗಳೂರು ತಾಲ್ಲೂಕು ದೊಣ್ಣೆಹಳ್ಳಿ ಹತ್ತಿರ ರಾಷ್ಟ್ರೀಯ ಹೆದ್ದಾರಿ-50ರಲ್ಲಿ ಇಂದು ಮುಂಜಾನೆ ಸಂಭವಿಸಿದೆ.

ಹೊಸಪೇಟೆ ತಾಲ್ಲೂಕು ಕಮಲಾಪುರದ ಸ್ಯಾಮ್ಸನ್ ಕುಮಾರ (44) ಮೃತ ವ್ಯಕ್ತಿ. ಈತ ಬೆಂಗಳೂರಿನಿಂದ ಕ್ರಿಸ್ ಮಸ್ ಪ್ರಯುಕ್ತ ಟಾಟಾ ಎಸಿ ವಾಹನದಲ್ಲಿ ಇತರರೊಂದಿಗೆ ಹೊಸಪೇಟೆ ತಾಲ್ಲೂಕಿನ ಹಳೇಮಲ್ಲಪ್ಪನ ಗುಡಿ ಗ್ರಾಮಕ್ಕೆ ಬರುತ್ತಿರುವಾಗ ದೊಣೆಹಳ್ಳಿ ಗ್ರಾಮದ ಹತ್ತಿರ ಮೂತ್ರ ವಿಸರ್ಜನೆ ನಂತರ ವಾಪಸ್ ರಸ್ತೆ ದಾಟುತ್ತಿರುವಾಗ ಚಿತ್ರದುರ್ಗದ ಕಡೆಯಿಂದ ಬಂದ ಲಾರಿಯು ಡಿಕ್ಕಿ ಪಡಿಸಿ ನಿಲ್ಲಿಸದೇ ಹಾಗೆಯೇ ತೆರಳಿದೆ.

## ನಗರದ ಶ್ರೀ ಬನ್ನಿ ಮಹಾಂಕಾಳಮ್ಮ ದೇವಸ್ಥಾನದಲ್ಲಿ ಇಂದು ಕಾರ್ತಿಕೋತ್ಸವ

ಕೆ.ಬಿ. ಬಡಾವಣೆಯ ಕೆ.ಟಿ.ಜೆ ಕಾಂಪೌಂಡ್‌ನಲ್ಲಿರುವ ಶ್ರೀ ಬನ್ನಿ ಮಹಾಂಕಾಳಮ್ಮ ದೇವಸ್ಥಾನದ ಕಾರ್ತಿಕೋತ್ಸವ ಇಂದು ಸಂಜೆ 7 ಗಂಟೆಗೆ ನಡೆಯಲಿದೆ. ವಾಣಿವಿಲಾಸ್ ಶ್ರೀಮತಿ ಎಂ. ಚಂದ್ರಕಾಂತಮ್ಮ, ಎಸ್. ಆರ್. ಮುರಿಗೆಪ್ಪನವರ ಮಕ್ಕಳು ಪ್ರಸಾದದ ಸೇವಾರ್ಥಿಗಳಾಗಿದ್ದಾರೆ ಎಂದು ವಾಣಿ ಭೂಷಣ್ಣ ಗೆಳೆಯರ ಬಳಗ, ಶ್ರೀ ಬನ್ನಿಮಹಾಂಕಾಳಮ್ಮ ಮಹಿಳಾ ವೃಂದದವರು ತಿಳಿಸಿದ್ದಾರೆ.

## ಜಿಗಳಿ ಗ್ರಾಮದ ಪುಟ್ಟಣ್ಣರ ಶೇಖರಪ್ಪ ನಿಧನ



ಹರಿಹರ ತಾಲ್ಲೂಕು ಜಿಗಳಿ ಗ್ರಾಮದ ವಾಸಿ ದಿ.ಪುಟ್ಟಣ್ಣರ ಕೊಕ್ಕಪ್ಪನವರ ಪುತ್ರರಾದ
**ಶ್ರೀ ಪುಟ್ಟಣ್ಣರ ಶೇಖರಪ್ಪ** (58 ವರ್ಷ)
ಅವರು ದಿನಾಂಕ 24.12.2020 ರ ಗುರುವಾರ ರಾತ್ರಿ 8.50 ಕ್ಕೆ ನಿಧನರಾದರು. ಪತ್ನಿ, ಓರ್ವ ಪುತ್ರ, ಇಬ್ಬರು ಪುತ್ರಿಯರು, ಸಹೋದರರು, ಸಹೋದರಿಯರು, ಅಳಿಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 25.12.2020ರ ಶುಕ್ರವಾರ ಮಧ್ಯಾಹ್ನ 12 ಗಂಟೆಗೆ ಜಿಗಳಿ ಗ್ರಾಮದಲ್ಲಿ ನೆರವೇರಲಿದೆ. ಮೃತರು ಜಿಗಳಿ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರಾಗಿ, ಶ್ರೀ ರಂಗನಾಥ ಸ್ವಾಮಿ ದೇವಸ್ಥಾನದ ಧರ್ಮದರ್ಶಿಗಳಾಗಿ ಸೇವೆ ಸಲ್ಲಿಸಿದ್ದರು.
ದುಃಖಿತಪ್ತರು: **ಪುಟ್ಟಣ್ಣರ ವಂಶಸ್ಥರು ಹಾಗೂ ಬಂಧು-ಮಿತ್ರರು.**

## ಕ್ರಮಕ್ಕೆ ಸೂಚನೆ

**(1ನೇ ಪುಟದಿಂದ)** ಕಾರ್ಯಾಚರಣೆ ವಿಧಾನಗಳನ್ನು ಸಿದ್ದಪಡಿಸಿದ್ದು, ಅದರಂತೆ ಕ್ರಮ ವಹಿಸುವಂತೆ ಶಾಲೆಯ ಎಲ್ಲಾ ಮುಖ್ಯ ಶಿಕ್ಷಕರುಗಳಿಗೆ ಸೂಚಿಸಲಾಗಿರುತ್ತದೆ ಎಂದು ಜಿಲ್ಲಾ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಸಿ.ಆರ್. ಪರಮೇಶ್ವರಪ್ಪ ತಿಳಿಸಿದ್ದಾರೆ.

### ದಿನದ ಚುಟುಕು

ಸತ್ಕಾರ್ಯದಲ್ಲಡಗಿದ ಸತ್ಫಲ
ಚಿಂತನೆಯಲ್ಲದು ಸಫಲ
ದುಷ್ಕಾರ್ಯದಲ್ಲಿ ಸಿಗದು ಫಲ
ಸತ್ಯ ಕಾಯದೇ ಅದು ವಿಫಲ !
- ವೀಕೆಎಂ

## ದೂಡಾ ಮೂಲೆ ನಿವೇಶನ ಹರಾಜು ಮಾಡದೆ ಭ್ರಷ್ಟಾಚಾರ : ಜಾಧವ್

ದಾವಣಗೆರೆ, ಡಿ.24- ಡಿ.ಮಾಲತೇಶ್ ರಾವ್ ಜಾಧವ್ ದೂಡಾ ಅಧ್ಯಕ್ಷರಾಗಿದ್ದ ವೇಳೆ ಮೂಲೆ ನಿವೇಶನಗಳನ್ನು ಹರಾಜು ಮಾಡುವ ಬದಲು ಅಳತೆ ಬದಲಾಯಿಸಿ ಅದರಲ್ಲಿ ಕೆಲವನ್ನು ಸ್ವಂತಕ್ಕೆ ಬರೆದು ಕೊಂಡಿದ್ದಾರೆ ಎಂದು ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷ ಯಶವಂತರಾವ್ ಜಾಧವ್ ಆರೋಪಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿಂದು ದಾಖಲೆಗಳನ್ನು ಪ್ರದರ್ಶಿಸಿ ಮಾತನಾಡಿದ ಅವರು, ನಿಜಲಿಂಗಪ್ಪ ಬಡಾವಣೆಯಲ್ಲಿ ಮೂಲೆ ನಿವೇಶನ ಹರಾಜು ಮಾಡುವ ಬದಲು ಅಳತೆ ಬದಲಿಸಿ ಪ್ರಾಧಿಕಾರದ ಮಟ್ಟದಲ್ಲಿಯೇ ಅನುಮೋದನೆ ಪಡೆದುಕೊಂಡು 21 ನಿವೇಶನಗಳನ್ನು ತಮಗೆ ಬೇಕಾದವರಿಗೆ ನೀಡಿದ್ದಾರೆ. ಅದರಲ್ಲೂ 5 ನಿವೇಶನಗಳನ್ನು ಅವರ ಸ್ವಂತಕ್ಕೆ ಬರೆದುಕೊಂಡಿದ್ದಾರೆ ಎಂದು ಹೇಳಿದರು. ದೇವರಾಜ ಅರಸು ಬಡಾವಣೆಯಲ್ಲೂ 5 ನಿವೇಶನಗಳನ್ನು ಮಾಲತೇಶ್ ರಾವ್ ಜಾಧವ್ ತನ್ನ ಪತ್ನಿ ಮಾಜಿ ಮೇಯರ್ ಅನಿತಾಬಾಯಿ ಹೆಸರಿಗೆ ವರ್ಗಾಯಿಸಿಕೊಂಡಿದ್ದಾರೆ ಎಂದು ದೂರಿದರು.

ಪಾಲಿಕೆ ಸದಸ್ಯ ದೇವರಮನಿ ಶಿವಕುಮಾರ್ ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ ಕುಟುಂಬದ ಮೂವರ ಹೆಸರಿಗೆ ನಿವೇಶನ ಬರೆಸಿಕೊಂಡಿದ್ದಾರೆ. ಲಾಟರಿ ಮೂಲಕ ಆಯ್ಕೆಯಾಗಿದ್ದರೆ ಅಕ್ಕಪಕ್ಕದಲ್ಲಿಯೇ ಕುಟುಂಬದ ಮೂವರಿಗೆ ಹೇಗೆ ನಿವೇಶನ ಸಿಗಲು ಸಾಧ್ಯ ? ಎಂದು ಪ್ರಶ್ನಿಸಿದರು.

ದೂಡಾ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್, ಸರ್ಕಾರದ ಆಸ್ತಿಯನ್ನು ಯಾರೇ ಕಬಳಿಸಿದ್ದರೂ ಮುಲಾಜಿಲ್ಲದೆ ವಾಪಸ್ ಪಡೆಯಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದರು. ಪತ್ರಿಕಾಗೋಷ್ಠಿಯಲ್ಲಿ ಪಾಲಿಕೆ ಸದಸ್ಯರಾದ ಎಸ್.ಟಿ. ವೀರೇಶ್, ಎಲ್.ಡಿ. ಗೋಣೆಪ್ಪ, ಮುಖಂಡರಾದ ಗೋಪಾಲರಾವ್ ಮಾನೆ, ಟಿಂಕರ್ ಮಂಜಣ್ಣ, ರಾಕೇಶ್, ಪ್ರವೀಣ್, ಪಿ.ಸಿ. ಶ್ರೀನಿವಾಸ್ ಉಪಸ್ಥಿತರಿದ್ದರು.



## ಹೊಸಹಳ್ಳಿಯಲ್ಲಿ ನಾಳೆ ಕಾರ್ತಿಕ

ದಾವಣಗೆರೆ, ಡಿ.24- ತಾಲ್ಲೂಕಿನ ಹೆಬ್ಬಾಳ ಗ್ರಾಮದ ಹತ್ತಿರವಿರುವ ಹೊಸಹಳ್ಳಿ ಗ್ರಾಮದ ಶ್ರೀ ಅಭಯ ಹಸ್ತ ಆಂಜನೇಯ ಸ್ವಾಮಿಯ ಕಡೆಯ ಕಾರ್ತಿಕೋತ್ಸವವನ್ನು ನಾಡಿದ್ದು ದಿನಾಂಕ 26ರ ಶನಿವಾರ ಸಂಜೆ 5.30 ಗಂಟೆಗೆ ನೆರವೇರಿಸಲಾಗುವುದು.

# ಸಫಾಯಿ ಕರ್ಮಚಾರಿಗಳಿಗೆ ಹೋರಾಟದ ಪರಿಸ್ಥಿತಿ ಶೋಚನೀಯ



ದಾವಣಗೆರೆ, ಡಿ.24- ಸಫಾಯಿ ಕರ್ಮಚಾರಿಗಳಿಗೆ ಆಗಿರುವ ಗತಕಾಲದ ಅನ್ಯಾಯವನ್ನು ಮತ್ತು ಅಗೌರವದ ಬದುಕನ್ನು ಸರಿಪಡಿಸುವುದಕ್ಕೆ ಮತ್ತು ಗೌರವಯುತ ಬದುಕನ್ನು ನಡೆಸುವುದಕ್ಕೆ ಪುನರ್ವಸತಿ ಕಲ್ಪಿಸುವುದು ಅತ್ಯವಶ್ಯಕ. ಆದರೆ, ಇಂದಿಗೂ ಪುನರ್ವಸತಿ ಹಾಗೂ ಗೌರವಯುತ ಬದುಕು ಕಟ್ಟಿಕೊಳ್ಳಲು ಹೋರಾಟ ನಡೆಸುವ ಪರಿಸ್ಥಿತಿ ನಿರ್ಮಾಣವಾಗಿರುವುದು ನಿಜಕ್ಕೂ ಶೋಚನೀಯ ಎಂದು ರಾಜ್ಯ ಕಾನೂನು ಸೇವಾ ಪ್ರಾಧಿಕಾರದ ಸದಸ್ಯರು, ವಕೀಲರೂ ಆದ ಎಲ್.ಹೆಚ್. ಅರುಣಕುಮಾರ್ ಕಳವಳ ವ್ಯಕ್ತಪಡಿಸಿದರು.

ನಗರದ ರೋಟರಿ ಬಾಲಭವನದಲ್ಲಿ ಸಫಾಯಿ ಕರ್ಮಚಾರಿಗಳ ಕಾವಲು ಸಮಿತಿ- ಕರ್ನಾಟಕ, ಸಫಾಯಿ ಕರ್ಮಚಾರಿಗಳ ಸಮಿತಿ- ದಾವಣಗೆರೆ ಜಿಲ್ಲೆ, ಮ್ಯಾನುಯಲ್ ಸ್ಕ್ಯಾವೆಂಜರ್ಸ್ ಸಂಘಗಳ ಒಕ್ಕೂಟದ ಸಹಯೋಗದಲ್ಲಿ ಮ್ಯಾನುಯಲ್ ಸ್ಕ್ಯಾವೆಂಜರ್ಸ್ ನೇಮಕಾತಿ ನಿಷೇಧ ಮತ್ತು ಅವರ ಪುನರ್ವಸತಿ ಕಾಯಿದೆ-2013 ಕುರಿತು ನಿನ್ನೆ ಏರ್ಪಡಿಸಿದ್ದ ಜಾಗೃತಿ ಮತ್ತು ಜಿಲ್ಲಾ ಮಟ್ಟದ ನಾಯಕತ್ವ ತರಬೇತಿ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ಮಲ ಹೊರುವ ಜಾಡಮಾಲಿಗಳೆಂಬ ಅನಿಷ್ಠ ಪದ್ಧತಿಗಳನ್ನು ಸಮಾಜದಲ್ಲಿ ಇನ್ನಿಲ್ಲದಂತೆ ನಿರ್ಮೂಲನೆ ಮಾಡಲು ಮ್ಯಾನುಯಲ್ ಸ್ಕ್ಯಾವೆಂಜರ್ಸ್ ನೇಮಕಾತಿ ನಿಷೇಧ ಮತ್ತು ಅವರ ಪುನರ್ವಸತಿ ಕಾಯಿದೆ-2013 ಜಾರಿಗೆ ತರಲಾಯಿತು. ಇಂದಿಗೂ ಮಲ ಹೊರುವ ಮತ್ತು ಬಾಚುವ ಪದ್ಧತಿ ಜೀವಂತವಾಗಿರುವುದು ದೇಶಕ್ಕೆ ದೊಡ್ಡ ಕಳಂಕವಾಗಿದೆ.

ಆಧುನಿಕ ಉಪಕರಣ ಬಳಸಿ, ಮಲದ ಗುಂಡಿಗಳನ್ನು ಹಾಗೂ ಚರಂಡಿಗಳನ್ನು ಸ್ವಚ್ಛಗೊಳಿಸಬೇಕೆಂಬ ನಿಯಮವಿದ್ದರೂ ಸಫಾಯಿ ಕರ್ಮಚಾರಿಗಳನ್ನು ಯಾವುದೇ ಸುರಕ್ಷತಾ ಕ್ರಮ ಇಲ್ಲದೇ ಮಲದ ಗುಂಡಿಗೆ ಇಳಿಸಿ ಮಲ ಬಾಚಲು ಹಚ್ಚಿ, ಅವರ ಸಾವಿಗೆ ಕಾರಣವಾಗುತ್ತಿರುವುದು ದುರ್ದೈವದ ಸಂಗತಿ ಎಂದು ಬೇಸರ ವ್ಯಕ್ತಪಡಿಸಿದರು.

ಸಮಾಜದಲ್ಲಿ ಇನ್ನೂ ದೇವದಾಸಿ ಪದ್ಧತಿ, ಬಾಲ್ಯ ವಿವಾಹ, ಬಾಲಕಾರ್ಮಿಕ ಪದ್ಧತಿಗಳಂತಹ ಅನಿಷ್ಟ ಪದ್ಧತಿಗಳು ಆಚರಣೆಯಲ್ಲಿವೆ. ಇವು ತೊಲಗಬೇಕಾದರೆ, ಜನರ ಮನಸ್ಸು ಸ್ವಚ್ಛಗೊಳಿಸುವ ಕಾರ್ಯ ಮೊದಲಾಗಬೇಕು ಎಂದು ಅರುಣ್ ಕುಮಾರ್ ಹೇಳಿದರು.

### ಜಿಲ್ಲಾ ಮಟ್ಟದ ನಾಯಕತ್ವ ತರಬೇತಿ ಕಾರ್ಯಾಗಾರದಲ್ಲಿ ಅರುಣಕುಮಾರ್ ಕಳವಳ

ಸಫಾಯಿ ಕರ್ಮಚಾರಿ ಕಾವಲು ಸಮಿತಿ ರಾಜ್ಯ ಸಂಚಾಲಕ ಕೆ.ಬಿ. ಓಬಳೇಶ್ ಮಾತನಾಡಿ, ಮಲ ಬಾಚುವ ಭಂಗಿಗಳಿಗೆ ಪುನರ್ವಸತಿ ಕಲ್ಪಿಸುವ ಕೆಲಸ ಆಗುತ್ತಿಲ್ಲ. ಹೀಗಾಗಿ ನಮ್ಮ ಹಕ್ಕುಗಳನ್ನು ಪಡೆಯಲು ಸಂಘಟಿತ ಹೋರಾಟ ನಡೆಸಬೇಕಾಗಿದೆ ಎಂದು ಸಫಾಯಿ ಕರ್ಮಚಾರಿಗಳಿಗೆ ಕಿವಿಮಾತು ಹೇಳಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಜಾಗೃತ ಸಮಿತಿಯ ಮಂಜಮ್ಮ, ಕಾವಲು ಸಮಿತಿಯ ವಾಸುದೇವ, ಡಿ.ಎಸ್.ಬಾಬಣ್ಣ, ಹೆಚ್. ಮಲ್ಲೇಶ್, ಎನ್. ಹುಚ್ಚೆಂಗಪ್ಪ, ಅಂಜಿನಪ್ಪ, ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕ ರಮೇಶ್ ಸೇರಿದಂತೆ ಇತರರು ಇದ್ದರು.

## ಬೆಲೆ ಚರ್ಚಿಸುವುದು ತಾರ್ಕಿಕವಲ್ಲ

(1ನೇ ಪುಟದಿಂದ) ಕಾಯ್ದೆಗಳಿಂದ ಕೃಷಿ ಇಳುವರಿ ಖರೀದಿ ಮೇಲೆ ಯಾವುದೇ ಪರಿಣಾಮವಾಗುವುದಿಲ್ಲ. ಕೃಷಿ ಕಾಯ್ದೆ ವ್ಯಾಪ್ತಿಯ ಹೊರಗಿರುವ ಬೆಂಬಲ ಬೆಲೆ ಕುರಿತು ಹೊಸ ಬೇಡಿಕೆ ಇಡುವುದು ತಾರ್ಕಿಕವಲ್ಲ ಎಂದವರು ಇದೇ ಸಂದರ್ಭದಲ್ಲಿ ತಿಳಿಸಿದ್ದಾರೆ. ಕೇಂದ್ರ ಸರ್ಕಾರಕ್ಕೆ ಜನವರಿ 23ರಂದು ಪತ್ರ ಬರೆದಿದ್ದ ರೈತ ಮುಖಂಡರು, ಮಾತುಕತೆ ಕುರಿತು ಸ್ಪಷ್ಟ ಪ್ರಸ್ತಾವನೆ ಕಳಿಸಬೇಕು ಎಂದು ಕೇಳಿದ್ದರು.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಎಸ್.ಎಸ್. ಬಡಾವಣೆ, 'ಬಿ' ಬ್ಲಾಕ್, ಶಾಂತಿನಗರ, ಕುಂದುವಾಡ ರಸ್ತೆ, ಮಹಾನಗರಪಾಲಿಕೆ ಕುಡಿಯುವ ನೀರಿನ ಸ್ಥಾವರ, ಬಸವೇಶ್ವರ ಬಡಾವಣೆ, ಮಹಾಲಕ್ಷ್ಮಿ ಬಡಾವಣೆ, ಬಾಲಾಜಿ ನಗರ, ಕುಂದುವಾಡ ಕೆರೆ ಹಾಗು ಸುತ್ತಮುತ್ತ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಬೆಸ್ಕಾಂ ಪ್ರಕಟಣೆ ತಿಳಿಸಿದೆ.

## ನಗರದ ಶ್ರೀ ಕನ್ಯಕಾ ಪರಮೇಶ್ವರಿ ದೇವಸ್ಥಾನದಲ್ಲಿಂದು ವೈಕುಂಠ ಏಕಾದಶಿ

ಎಸ್.ಕೆ.ಪಿ. ರಸ್ತೆಯಲ್ಲಿರುವ ಶ್ರೀ ಕನ್ಯಕಾ ಪರಮೇಶ್ವರಿ ದೇವಸ್ಥಾನದಲ್ಲಿ ವೈಕುಂಠ ಏಕಾದಶಿ ಪ್ರಯುಕ್ತ ಇಂದು ಬೆಳಿಗ್ಗೆ 8.15 ಗಂಟೆಗೆ ದೇವಸ್ಥಾನದಲ್ಲಿ ಶ್ರೀ ಜನಾರ್ಧನ ಸ್ವಾಮಿಗೆ ಅಭಿಷೇಕ, ಅಲಂಕಾರ, ಅರ್ಚನೆ ನಡೆಯಲಿದೆ.

### ವೈಕುಂಠ ಏಕಾದಶಿ

ಭೀಷ್ಮಾಚಾರ್ಯರಿಗೆ ಸಿಕ್ಕಿತು ಮುಕ್ತಿ
ಮುರಾಸುರನನ್ನು ವಧಿಸಿದ ಹರಿ
ಅಂಬರೀಶನ ಸಾಧನೆಗೆ ಮಹತ್ತು
ವೈಕುಂಠ ಏಕಾದಶಿಯ ಸಾರ್ವತ್ರಿಕ ಸಂಪತ್ತು

ಉತ್ತಮ ಆರೋಗ್ಯ ಹೊಂದಲು
ಚಂದಿರ ಭೂರಮೆಯ ಸನಿಹ ಬರಲು
ಮನುಜನ ಜೀವನ ಯಾನದಲಿ
ಸಾಧನಾ ಸಂಪತ್ತು ಹೊಂದಲಿ

ನಾರಾಯಣನ ದಿವ್ಯ ನಾಮ
ಪಠಿ ಸಬೇಕು ಸಹಸ್ರ ನಾಮ
ಉತ್ತರ ದ್ವಾರದೇ ಸ್ವಾಮಿಯ ದರುಶನ
ಕೊಡುವನು ಸಕಲ ಸೌಭಾಗ್ಯ

ವಿಷ್ಣುವು ವೈಕುಂಠದಿಂದ ಭೂಮಿಗೆ
ಮನುಷ್ಯರ ಪಾಪಗಳ ಕಳೆವುದಕ್ಕೆ
ಬರುವ ಪವಿತ್ರವಾದ ದಿನ
ಸಾಧನೆಗೆ ರಹದಾರಿ ಈ ದಿನ

- ಕೋಮಲ ವಿ. ಕುಮಾರ್

## ನಗರದಲ್ಲಿ ಇಂದು ನಾಲ್ಕು ಕೃತಿಗಳ ಲೋಕಾರ್ಪಣೆ

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ವೇದಗಂಗಾ ಪ್ರಕಾಶನ (ದಾವಣಗೆರೆ), ಗುಹೇಶ್ವರ ಪ್ರಕಾಶನ (ಸಾಸ್ವೆಹಳ್ಳಿ), ಚೈತನ್ಯ ಚಿಲುಮೆ ಪ್ರಕಾಶನ (ದಾವಣಗೆರೆ), ಶ್ರೀ ರಾಮ ಬುಕ್ ಸೆಂಟರ್ (ಮಂಡ್ಯ) ಇವರುಗಳ ಸಹಯೋಗದಲ್ಲಿ 'ಜೀವದಾಯಿನಿ', 'ಸ್ಥಾವರಕ್ಕಳಿವುಂಟು', 'ಸಾಮಾನ್ಯ ಜ್ಞಾನನಿಧಿ' ಮತ್ತು 'ಸಾವಯವ ಬುತ್ತಿ' ಈ ನಾಲ್ಕು ಕೃತಿಗಳ ಲೋಕಾರ್ಪಣೆ ಕಾರ್ಯಕ್ರಮವನ್ನು ಇಂದು ಬೆಳಿಗ್ಗೆ 10.30 ಕ್ಕೆ ಕುವೆಂಪು ಕನ್ನಡ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ. ಅಧ್ಯಕ್ಷತೆಯನ್ನು ಡಾ. ಹೆಚ್.ಎಸ್. ಮಂಜುನಾಥ ಕುರ್ಕಿ ವಹಿಸುವರು. ಕಾರ್ಯಕ್ರಮದ ಉದ್ಘಾಟನೆಯನ್ನು ಡಾ. ರೇವಣ್ಣ ಬಳ್ಳಾರಿ ನೆರವೇರಿಸುವರು. ಕೃತಿಗಳ ಬಿಡುಗಡೆ ಡಾ. ಎಂ.ಜಿ. ಈಶ್ವರಪ್ಪ ನೆರವೇರಿಸುವರು. ಎಸ್.ಓಂಕಾರಯ್ಯ ತವನಿಧಿ, ಡಾ. ದಾದಾಪೀರ್ ನವಿಲೇಹಾಳ್, ಕೆ.ಎಸ್. ವೀರಭದ್ರಪ್ಪ ತೆಲಿಗಿ, ಸಾಹಿತಿ ಕೆ.ಪಿ. ದೇವೇಂದ್ರಯ್ಯ, ಜಿ. ಮುರಿಗೆಪ್ಪ ಗೌಡರು, ಜಿ.ಎಂ. ಹಿರೇಮಠ ಮಾತನಾಡುವರು. ಮುಖ್ಯ ಅತಿಥಿಗಳಾಗಿ ಬಿ. ವಾಮದೇವಪ್ಪ, ಎಸ್.ಟಿ. ಶಾಂತ ಗಂಗಾಧರ ಆಗಮಿಸುವರು.

## ನಗರದಲ್ಲಿಂದು ಕನಕ ಜಯಂತಿ

ಕನಕ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ದಾಸ ಶ್ರೇಷ್ಠ ಕನಕದಾಸರ 533ನೇ ಜಯಂತಿಯನ್ನು ಇಂದು ಬೆಳಿಗ್ಗೆ 11 ಕ್ಕೆ ಬೀರೇಶ್ವರ ಬಡಾವಣೆಯ ಮಂಜುನಾಥ ಕಾಲೇಜು ಹತ್ತಿರದ ಕೆಂಗಣ್ಣನವರ ಮನೆಯ ಹತ್ತಿರ ಹಮ್ಮಿಕೊಳ್ಳಲಾಗಿದೆ ಎಂದು ಸಂಘಟನೆಯ ಉಪಾಧ್ಯಕ್ಷ ಹಾಲೇಕಲ್ಲು ಎಸ್.ಟಿ. ಅರವಿಂದ್ ತಿಳಿಸಿದ್ದಾರೆ

## ಇಂದು ರೇಣುಕಾ ಯಲ್ಲಮ್ಮ ಕಾರ್ತಿಕ

ದಾವಣಗೆರೆ ವಿನೋಬನಗರ 4ನೇ ಮುಖ್ಯರಸ್ತೆ, 4ನೇ ಕ್ರಾಸ್‌ನಲ್ಲಿರುವ ಶ್ರೀ ರೇಣುಕಾ ಯಲ್ಲಮ್ಮದೇವಿ ದೇವಸ್ಥಾನದಲ್ಲಿ ಇಂದು ಸಂಜೆ 7 ಕ್ಕೆ ಕಾರ್ತಿಕೋತ್ಸವ ನಡೆಯಲಿದೆ.


**In the Court of the Senior Civil Judge : Penukonda**
**Ananthapuramu District, Andharapradesh**

I.A. 629/2019 in O.S.28/2013
Between : Balija Pandurangappa Sreedevi, w/o K. Ravi Prasad, Ananthapuramu - Petitioner/Plaintiff and Balija Pandurangappa and others-Respondents.
To
Respondent no.9
B. Padmavathi, W/o Late B. Pandurangappa, age 63 years, #1080, JCR Extention, 7th cross, Chitradurga, Karnataka.
Where as the above matter is posted to 5.1.2021 for your appearance and you have to attend before the above mentioned court on 5.1.2021 at 10.30 am, either in persons or through advocate, failing which the above case will be decided ex-parte

**SRI. L. VISWANATH**
**Advocate, Penukonda, Anantapur (Dist)**



## ಸವಿತಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)

ನಂ. 1352/2, ಶ್ರೀ ಎಸ್. ವರದರಾಜ ಕಾಂಪ್ಲೆಕ್ಸ್, ಮೊದಲನೇ ಮಹಡಿ, ಬಾಪೂಜಿ ಆಸ್ಪತ್ರೆ ರಸ್ತೆ, ದಾವಣಗೆರೆ.
Email : savithasociety271329@gmail.com. Ph : 08192 271329, Cell : 97429 42626

### 2019-20ನೇ ಸಾಲಿನ ವಾರ್ಷಿಕ ಮಹಾಸಭೆಯ ಆಹ್ವಾನ

**ದಿನಾಂಕ: 25.12.2020ನೇ ಶುಕ್ರವಾರ ಮಧ್ಯಾಹ್ನ 12.00 ಗಂಟೆಗೆ**
**ಸ್ಥಳ : ಶ್ರೀ ಸವಿತಾ ಮಹರ್ಷಿ ಸಮುದಾಯ ಭವನ,**
ಶ್ರೀ ಮಾರುತಿ ಮಂದಿರ ಎದುರು, ಕೊಂಡಜ್ಜಿ ರಸ್ತೆ, ದಾವಣಗೆರೆ.

ವಿಶೇಷ ಸೂಚನೆ :
* ವಾರ್ಷಿಕ ಮಹಾಸಭೆಗೆ ಬರುವಾಗ ಎಲ್ಲಾ ಸದಸ್ಯರು ತಪ್ಪದೇ ವಾರ್ಷಿಕ ವರದಿಯನ್ನು ತರಬೇಕಾಗಿ ಕೋರಿದೆ.
* ಕೋವಿಡ್-19 ಇರುವುದರ ಪ್ರಯುಕ್ತ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಮಾರ್ಗಸೂಚಿ ಅನ್ವಯ ಮಾಸ್ಕ್ ಧರಿಸುವುದು ಹಾಗೂ ಸಾಮಾಜಿಕ ಅಂತರ ಪಾಲಿಸುವುದು. ಸ್ಯಾನಿಟೈಸರ್ ಬಳಸುವುದನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.
* ಕೋವಿಡ್-19 ಪ್ರಯುಕ್ತ, ಉಪಹಾರ, ಭೋಜನ ವ್ಯವಸ್ಥೆ ಇರುವುದಿಲ್ಲ. ದಯವಿಟ್ಟು ಸದಸ್ಯರು ಸಹಕರಿಸಬೇಕು.

ಮಾನ್ಯ ಸದಸ್ಯರುಗಳಿಗೆ ಈಗಾಗಲೇ ಮಹಾಸಭೆಯ ನೋಟೀಸ್‌ಗಳನ್ನು ಕಳುಹಿಸಲಾಗಿದ್ದು, ತಲುಪದವರು ಇದನ್ನೇ ಆಹ್ವಾನವೆಂದು ಭಾವಿಸಿ, ಸಭೆಗೆ ಆಗಮಿಸಲು ವಿನಂತಿಸಲಾಗಿದೆ.

ಶ್ರೀ ಎನ್. ರಂಗಸ್ವಾಮಿ, ವಕೀಲರು — ಅಧ್ಯಕ್ಷರು
ಶ್ರೀ ಜಿ.ಸಿ. ಶ್ರೀನಿವಾಸ್ — ಉಪಾಧ್ಯಕ್ಷರು
ಕಾರ್ಯಕಾರಿ ಮಂಡಳಿ ಅಪ್ಪಣೆಯ ಮೇರೆಗೆ
(ಶ್ರೀ ಡಿ. ವೆಂಕಟೇಶ್ ನಾಯ್ಕ) — ಕಾರ್ಯದರ್ಶಿ


## ಸರ್ಕಾರದ ಪ್ರತಿಷ್ಠೆಗಾಗಿ ಅಲ್ಲ

(1ನೇ ಪುಟದಿಂದ) ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ತಾಂತ್ರಿಕ ಸಲಹಾ ಸಮಿತಿ ಶಿಫಾರಸ್ಸಿನ ಮೇಲೆ ತರಗತಿಗಳನ್ನು ಆರಂಭ ಮಾಡುವ ಬಗ್ಗೆ ನಿರ್ಧಾರ ಕೈಗೊಂಡಿದ್ದೇವೆ.

ಆರೋಗ್ಯ ಮತ್ತು ಶಿಕ್ಷಣ ಸಮಾಜಕ್ಕೆ ಅತ್ಯವಶ್ಯ ಎಂದು ಅರಿತು ಸಕಾರದಲ್ಲಿ ಸಮನ್ವಯತೆಯಿಂದ ಕೆಲಸ ಮಾಡುತ್ತಿದ್ದೇವೆ. ಗ್ರಾಮೀಣ ಭಾಗದಲ್ಲಿ ಶಾಲೆಗಳಿಲ್ಲದೆ ಮಕ್ಕಳು ಕೂಲಿ ಕೆಲಸಕ್ಕೆ ಹೋಗುತ್ತಿದ್ದಾರೆ. ಮತ್ತೆ ಕೆಲವೆಡೆ ಬಾಲ್ಯವಿವಾಹ ನಡೆಯುತ್ತಿವೆ.

ಇದನ್ನು ಹೋಗಲಾಡಿಸುವ ಉದ್ದೇಶದಿಂದಲೇ ಶಾಲೆ ಆರಂಭದ ನಿರ್ಧಾರ ಮಾಡಿದ್ದೇವೆ.

ಸರ್ಕಾರದಲ್ಲಿ ಸಮನ್ವಯತೆ ಇದೆ. ಶಾಲೆ ಆರಂಭಕ್ಕೆ ನಾನು ಹಠ ಹಿಡಿದಿಲ್ಲ. ಅದರಿಂದ ಆಗಬೇಕಾಗಿರುವುದು ಏನೂ ಇಲ್ಲ. ಗ್ರಾಮೀಣ ಮಕ್ಕಳಿಗೂ ಶಿಕ್ಷಣ ನೀಡುವ ಉದ್ದೇಶದಿಂದ ಎಲ್ಲಾ ಮುನ್ನೆಚ್ಚರಿಕಾ ಕ್ರಮಗಳನ್ನು ವಹಿಸಿ, ಶಾಲೆಗಳನ್ನು ಆರಂಭಿಸುತ್ತಿದ್ದೇವೆ.

ಹೈಕೋರ್ಟ್ ಕೂಡಾ ನಮಗೆ ಕೆಲವು ಸಲಹೆ, ಸೂಚನೆಗಳನ್ನು ನೀಡಿದೆ. ಅದರಂತೆ ನಡೆದುಕೊಳ್ಳುತ್ತಿದ್ದೇವೆ ಎಂದು ತಿಳಿಸಿದರು.


## ನೂತನ ಪ್ರಾರಂಭ

### ಗ್ಲೋಬಲ್ ಹೆಲ್ಪ್‌ಲೈನ್ ನಿರುದ್ಯೋಗ ನಿವಾರಣ ಸಂಘ (ರಿ.)
**Global Helpline Nirudyoga Nivarana Sangha (R.)**

#1948/21, 13ನೇ ಕ್ರಾಸ್, ತರಳಬಾಳು ಬಡಾವಣೆ, ದಾವಣಗೆರೆ-577 005.
E.mail : globalhelplinejbj@gmail.com.

### ಉದ್ಯೋಗ ಮಾಹಿತಿ ಕೇಂದ್ರ

ಯುವಕ/ಯುವತಿಯರೇ, ಕೆಲಸವಿಲ್ಲ ಎಂದು ಕೊರಗಬೇಡಿ... ನಿಮ್ಮ ವಿದ್ಯಾರ್ಹತೆಗೆ ತಕ್ಕ ಕೆಲಸಗಳನ್ನು ನಮ್ಮ ಸಂಘದ ವತಿಯಿಂದ ಕೊಡಿಸುತ್ತೇವೆ. S.S.L.C., P.U.C., B.A., B.Com., B.Sc., B.B.M., MA, M.Sc, M.Com, MBA, MCA ಆದ ಅಭ್ಯರ್ಥಿಗಳು ನಮ್ಮ ಸಂಘಕ್ಕೆ ಬಂದು ಹೆಸರು, ವಿಳಾಸಗಳನ್ನು ನೊಂದಾಯಿಸಿಕೊಳ್ಳಿ ಹಾಗೂ "ಕೆಲಸಕ್ಕೆ ಹೋಗಲು ಸಿದ್ಧರಾಗಿ".

**ಸಂಪರ್ಕಿಸಿ : 81470 12999, 89512 72999**



## ಸರ್ಕಾರಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿ.,

#1653/51-1 & 1699/4, ಮೊದಲನೇ ಮಹಡಿ, ಬಿ.ಐ.ಇ.ಟಿ. ಕಾಲೇಜ್ ಮುಖ್ಯ ರಸ್ತೆ, ಸಿದ್ದವೀರಪ್ಪ ಬಡಾವಣೆ, ದಾವಣಗೆರೆ-04. ದೂರವಾಣಿ : 224408

### 7ನೇ ವಾರ್ಷಿಕ ಮಹಾಸಭೆಯ ಆಹ್ವಾನ

ಸಂಘದ 2019-20ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ದಿನಾಂಕ 26.12.2020ರ ಶನಿವಾರ ಬೆಳಿಗ್ಗೆ 11.00 ಗಂಟೆಗೆ ಸಂಘದ ಅಧ್ಯಕ್ಷರಾದ **ಶ್ರೀ ಎಂ.ಡಿ. ನೀಲಗಿರಿಯಪ್ಪ** ಇವರ ಅಧ್ಯಕ್ಷತೆಯಲ್ಲಿ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಮುದಾಯ ಭವನ, ನಿಜಲಿಂಗಪ್ಪ ಬಡಾವಣೆ, ರಿಂಗ್ ರಸ್ತೆ, ದಾವಣಗೆರೆಯಲ್ಲಿ ಏರ್ಪಡಿಸಲಾಗಿದೆ.

**ಮಾನ್ಯ ಷೇರುದಾರರಿಗೆ ಈಗಾಗಲೇ ಮಹಾಸಭೆಯ ನೋಟಿಸ್‌ಗಳನ್ನು ಕಳುಹಿಸಲಾಗಿದ್ದು ತಲುಪದವರು ಇದನ್ನೇ ಆಹ್ವಾನವೆಂದು ಭಾವಿಸಿ, ಆಗಮಿಸಲು ವಿನಂತಿ.**

**ವಿಶೇಷ ಸೂಚನೆ :** ಕೋವಿಡ್-19 ಇರುವುದರ ಪ್ರಯುಕ್ತ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಮಾರ್ಗಸೂಚಿ ಅನ್ವಯ ಮಾಸ್ಕ್ ಧರಿಸುವುದು ಹಾಗು ಸಾಮಾಜಿಕ ಅಂತರ ಪಾಲಿಸುವುದು. ಸ್ಯಾನಿಟೈಸರ್ ಬಳಸುವುದು ಕಡ್ಡಾಯ. ಕೋವಿಡ್-19 ಪ್ರಯುಕ್ತ ಉಪಹಾರ, ಭೋಜನ ವ್ಯವಸ್ಥೆ ಇರುವುದಿಲ್ಲ. ಸದಸ್ಯರು ಸಹಕರಿಸಬೇಕು.

ಶ್ರೀ ಶಿವಯೋಗಿ ಡಿ.ಆರ್. — ಕಾರ್ಯದರ್ಶಿ
ಶ್ರೀ ಹೆಚ್.ಎಂ. ರೇವಣಸಿದ್ದಪ್ಪ — ಗೌರವಾಧ್ಯಕ್ಷರು
ಶ್ರೀ ಎನ್.ಡಿ. ಮಂಜು — ಉಪಾಧ್ಯಕ್ಷರು
ಶ್ರೀ ಎಂ.ಡಿ. ನೀಲಗಿರಿಯಪ್ಪ — ಅಧ್ಯಕ್ಷರು



## ಮೃಗಶಿರಾ ಪೂರ್ಣಿಮಾ ಔಷಧಿ ಪ್ರಾಶನ

**ಕೆಮ್ಮು, ನೆಗಡಿ, ದಮ್ಮು, ಅಸ್ತಮಾ ವಿಶೇಷ ಚಿಕಿತ್ಸಾ ಶಿಬಿರ**

ದಿನಾಂಕ 30.12.2020, ಬುಧವಾರ (ಮೃಗಶಿರಾ ಪೂರ್ಣಿಮಾ)
ಸಮಯ : ಬೆಳಿಗ್ಗೆ 6 ರಿಂದ 7 ಗಂಟೆಯವರೆಗೆ

✦ ಈ ಅನುಭೂತ ಆಯುರ್ವೇದ ಔಷಧಿಯನ್ನು ಐದು ವರ್ಷ ಮೇಲ್ಪಟ್ಟವರಿಗೆ ಮಾತ್ರ ನೀಡಲಾಗುವುದು. ✦ ಮೊದಲ 200 ಜನರಿಗೆ ಮಾತ್ರ.
✦ ಆಸಕ್ತರು 22.12.2020ರಿಂದ 28.12.2020ರವರೆಗೆ ಆಸ್ಪತ್ರೆಗೆ ಭೇಟಿ ನೀಡಿ, ವೈದ್ಯರ ಸಲಹೆ ತೆಗೆದುಕೊಂಡು ಕೂಪನ್ ಪಡೆದುಕೊಳ್ಳಬೇಕು. (ಒಂದು ಕೂಪನ್ - 100 ರೂ.)
✦ ಔಷಧಿ ಸೇವಿಸುವವರು ದಿನಾಂಕ 30.12.2020ರಂದು ಖಾಲಿ ಹೊಟ್ಟೆಯಲ್ಲಿ ಸ್ನಾನ ಮಾಡಿಕೊಂಡು ಬರಬೇಕು.

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ :**

ANVAYA
### ಅನ್ವಯ ಆಯುರ್ವೇದ ಆಸ್ಪತ್ರೆ

#1981, 10ನೇ ಕ್ರಾಸ್, ಆಶ್ರಯ ಆಸ್ಪತ್ರೆ ಹಿಂಭಾಗ, ಎಂ.ಸಿ.ಸಿ. 'ಎ' ಬ್ಲಾಕ್, ದಾವಣಗೆರೆ.
ಫೋ. : 08192-252228, ಮೊ. : 8618642929



## ARADHYA STEEL PVT. LTD.,

Near Anagodu, Davangere - 577 556.

**ಕಂಪನಿಯಲ್ಲಿ ಕೆಲಸಗಾರರು ಬೇಕಾಗಿದ್ದಾರೆ**

ವಯಸ್ಸು : 18 – 30ರ ಒಳಗೆ
ITI - Fitter (15), ITI - Electrician (4), ITI - Welder (5)
WET MACHINE Operator - (15)
WIRE DRAWING Operator - (20)
ಸಮಯ : ಬೆಳಿಗ್ಗೆ 10.00 ರಿಂದ 4.00

Contact No.:9113592331 / 8884620546
By - ARCO-HR Services, Davangere.



## ಸಂಚಿತ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ.,

ಶ್ರೀ ಮುರುಘರಾಜೇಂದ್ರ ಕಾಂಪ್ಲೆಕ್ಸ್, ನಿಟುವಳ್ಳಿ ರಸ್ತೆ, ದಾವಣಗೆರೆ. ಫೋನ್ ; 08192-275317

### 20ನೇ ವಾರ್ಷಿಕ ಮಹಾಸಭೆಯ ಸೂಚನೆಗಳು

ಸಂಚಿತ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ., ದಾವಣಗೆರೆ ಇದರ 2019-2020ನೇ ಸಾಲಿನ 20ನೇ ವಾರ್ಷಿಕ ಮಹಾಸಭೆಯನ್ನು **ದಿನಾಂಕ : 25.12.2020ನೇ ಶುಕ್ರವಾರದಂದು ಬೆಳಿಗ್ಗೆ 11.30 ಗಂಟೆಗೆ ಸಂಘದ ಆವರಣದಲ್ಲಿ** ಕರೆಯಲಾಗಿದೆ.
ಮಾನ್ಯ ಸರ್ವಸದಸ್ಯರು ಸಕಾಲಕ್ಕೆ ಆಗಮಿಸಿ, ಸಭೆಯನ್ನು ಯಶಸ್ವಿಯಾಗಿ ನಡೆಸಿಕೊಡಬೇಕೆಂದು ಕೋರಲಾಗಿದೆ.

**ಸಂಘದ ಕಳೆದ 5 ವರ್ಷಗಳ ಆರ್ಥಿಕ ಪ್ರಗತಿಯ ಪಕ್ಷಿನೋಟ** (ರೂ. ಲಕ್ಷಗಳಲ್ಲಿ)


| ಕ್ರ.ಸಂ. | ಖರ್ಚಿನ ವಿವರ | 2015-16 | 2016-17 | 2017-18 | 2018-19 | 2019-20 |
|---|---|---|---|---|---|---|
| 1) | ಸದಸ್ಯರ ಸಂಖ್ಯೆ | 1148 | 1244 | 1290 | 1363 | 1400 |
| 2) | ಷೇರು ಬಂಡವಾಳ | 31.28 | 33.44 | 35.13 | 37.13 | 40.91 |
| 3) | ಠೇವಣಾತಿಗಳು | 695.10 | 777.62 | 821.66 | 927.24 | 978.92 |
| 4) | ಸಾಲಗಳು | 520.31 | 670.82 | 694.69 | 734.40 | 771.10 |
| 5) | ಕಾಯ್ದಿಟ್ಟ ನಿಧಿ ಮತ್ತು ಇತರೆ ನಿಧಿಗಳು | 69.79 | 74.94 | 89.57 | 101.20 | 111.67 |
| 6) | ನಿವ್ವಳ ಲಾಭ | 11.02 | 12.01 | 15.42 | 16.80 | 17.81 |
| 7) | ದುಡಿಯುವ ಬಂಡವಾಳ | 817.01 | 938.00 | 995.43 | 1090.47 | 1164.63 |
| 8) | ಲಾಭಾಂಶ (ಡಿವಿಡೆಂಡ್) | 13% | 13% | 14% | 14% | 10% ಉದ್ದೇಶಿತ |

**: ವಿಶೇಷ ಸೂಚನೆ :**


* ಈಗಿನ ಹೊಸ ತಿದ್ದುಪಡಿ ಕಾಯ್ದೆ ಮತ್ತು ನಿಯಮಗಳಂತೆ ಈ 2019-20ನೇ ಸಾಲಿನಿಂದ ಐದು ವಾರ್ಷಿಕ ಸಾಮಾನ್ಯ ಸಭೆಗಳ ಪೈಕಿ ಮೂರು ಸಭೆಗಳಿಗೆ ಹಾಜರಾಗುವುದು ಕಡ್ಡಾಯವಾಗಿರುವುದರಿಂದ ದಯಮಾಡಿ ಮಾನ್ಯ ಸದಸ್ಯರು ಪ್ರತಿ ವಾರ್ಷಿಕ ಮಹಾಸಭೆಗೆ ತಪ್ಪದೇ ಹಾಜರಾಗಬೇಕೆಂದು ಕೋರಲಾಗಿದೆ.
* ಈಗಾಗಲೇ ಮಹಾಸಭೆಯ ನೋಟಿಸನ್ನು ಸರ್ವ ಸದಸ್ಯರಿಗೂ ಅಂಚೆ ಮೂಲಕ ಕಳುಹಿಸಲಾಗಿದ್ದು, ನೋಟಿಸ್ ತಲುಪದೇ ಇರುವ ಸದಸ್ಯರು ಇದನ್ನೇ ಆಹ್ವಾನವೆಂದು ಭಾವಿಸತಕ್ಕದ್ದು ಹಾಗೂ ಸಭೆಗೆ ಬರುವಾಗ ಮಹಾ ಸಭೆಯ ಆಹ್ವಾನ ಪತ್ರಿಕೆಯನ್ನು ತರತಕ್ಕದ್ದು.
* ಕೋವಿಡ್ 19 ಪ್ರಯುಕ್ತ ಕಡ್ಡಾಯವಾಗಿ ಮಾಸ್ಕ್ ಮತ್ತು ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳಲು ವಿನಂತಿಸಿಕೊಳ್ಳುತ್ತೇವೆ. ಭೋಜನವಿರುವುದಿಲ್ಲ.

**ಕಾರ್ಯಕಾರಿ ಮಂಡಳಿ**





## ಮಹರ್ಷಿ ವಾಲ್ಮೀಕಿ ಜಾತ್ರೆ ಸಭೆ



ಮಹರ್ಷಿ ವಾಲ್ಮೀಕಿ ಜಾತ್ರೆ - 03ರ ಪ್ರಯುಕ್ತ ದಿನಾಂಕ 25.12.2020ರ ಶುಕ್ರವಾರ ಸಂಜೆ 4 ಗಂಟೆಗೆ ದಾವಣಗೆರೆ ನಾಯಕ ವಿದ್ಯಾರ್ಥಿ ನಿಲಯಕ್ಕೆ ಶ್ರೀ ಶ್ರೀ ಶ್ರೀ ಪ್ರಸನ್ನಾನಂದ ಮಹಾಸ್ವಾಮಿಗಳು ಆಗಮಿಸಲಿದ್ದಾರೆ. ಆದ ಪ್ರಯುಕ್ತ ಸಮಾಜದ ಬಂಧುಗಳು ಹಾಗೂ ನಾಯಕ ವಿದ್ಯಾರ್ಥಿ ನಿಲಯ, ದಾವಣಗೆರೆ ತಾಲ್ಲೂಕು ವಾಲ್ಮೀಕಿ ನಾಯಕ ಸಮಾಜ ಹಾಗೂ ದಾವಣಗೆರೆ ಜಿಲ್ಲಾ ವಾಲ್ಮೀಕಿ ನಾಯಕ ಯುವ ಘಟಕ ಹಾಗೂ ದಾವಣಗೆರೆ ಜಿಲ್ಲಾ ನಾಯಕ ನೌಕರರ ಸಂಘ ಮತ್ತು ವಾಲ್ಮೀಕಿ ನಾಯಕ ಮಹಿಳಾ ಘಟಕದ ಅಧ್ಯಕ್ಷರುಗಳು ಸರ್ವ ಸದಸ್ಯರುಗಳು ಹಾಗೂ ಸಮಾಜದ ಮುಖಂಡರುಗಳು ತಪ್ಪದೇ ಸಭೆಗೆ ಆಗಮಿಸಬೇಕಾಗಿ ಕೋರಲಾಗಿದೆ.

ಬಿ. ವೀರಣ್ಣ
ಅಧ್ಯಕ್ಷರು ಹಾಗೂ ಪದಾಧಿಕಾರಿಗಳು
**ದಾವಣಗೆರೆ ಜಿಲ್ಲಾ ವಾಲ್ಮೀಕಿ ನಾಯಕ ಸಮಾಜ ಹಾಗೂ ನಾಯಕ ವಿದ್ಯಾರ್ಥಿ ನಿಲಯ (ರಿ) ದಾವಣಗೆರೆ.**
ಮೊ: 80961 71787



## ಪತ್ರಿಕಾ ಪ್ರಕಟಣೆ

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಪ್ರಾಂತೀಯ ಕಛೇರಿ ಬೆಳಗಾವಿ. ಇವರ ಪರವಾಗಿ ಶ್ರೀ ಎ.ಎನ್. ಇಂಗಳಗಿ ವಕೀಲರು, ವ. ಗೌರವ ಮಧ್ಯಸ್ಥಗಾರರು ಇವರು ವಾದಿ ಸಹಕಾರಿ ಆಫೀಸಿನ ತೆರೆದ ನ್ಯಾಯಾಲಯದಲ್ಲಿ ವ್ಯಾಜ್ಯ ಸಂಖ್ಯೆ : 1/ಡಿ.ಆರ್.ಡಿ./ಕ.ರಾ.ಸೌ.ಸ.ನಿ./1654/2020-21. ವ್ಯಾಜ್ಯ ಸಂಖ್ಯೆ : 2/ಡಿ.ಆರ್.ಡಿ./ಕ.ರಾ.ಸೌ.ಸ.ನಿ./1677/2020-21.

ವಾದಿ : ಶಾಖಾಧಿಕಾರಿಗಳು, ನವಕರ್ನಾಟಕ ಸೌಹಾರ್ದ ಕ್ರೆಡಿಟ್ ಕೋ-ಆಪ್ ಲಿ., ಜಾಬಿನ್ ಬಿಲ್ಡಿಂಗ್, ಯಾಲಕ್ಕಿ ಓಣಿ, ಹಾವೇರಿ. **-ವಿರುದ್ಧ-**

ಪ್ರತಿವಾದಿಯರು : 1) ನಾಗರಾಜ ಮಲಕಪ್ಪ ಪರಮಣ್ಣನವರ, ಸಾ॥ ಬಸಾಪುರ, ತಾ॥ ವ ಜಿ॥ ಹಾವೇರಿ. 2) ಮಂಜುನಾಥ ನಾಗಪ್ಪ ಅನ್ವೇರಿ, 3) ಸುಭಾಸ ನಾಗಪ್ಪ, ದಾವಣಗೆರೆ. ಸಾ॥ ಗುಂಡೇನಹಳ್ಳಿ, ತಾ॥ ಬ್ಯಾಡಗಿ, ಜಿ॥ ಹಾವೇರಿ.

ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿ ಅಧಿನಿಯಮ 1997ರ ಕಲಂ 39ರ ಅಡಿಯಲ್ಲಿ ವಾದಿಯರ ಸೊಸೈಟಿ ಪರವಾಗಿ ಶಾಖಾಧಿಕಾರಿಗಳು ದಾವಾ ಅರ್ಜಿಯನ್ನು ಸಲ್ಲಿಸಿ, ಪ್ರತಿವಾದಿಯರಿಂದ ವ್ಯಾಜ್ಯ ಸಂಖ್ಯೆ : 1/ಡಿ.ಆರ್.ಡಿ./ಕ.ರಾ.ಸೌ.ಸ.ನಿ/1654/2020-21, ವ್ಯಾಜ್ಯ ಸಂಖ್ಯೆ : 2/ಡಿ.ಆರ್.ಡಿ./ಕ.ರಾ.ಸೌ.ಸ.ನಿ./1657/2020-21 ದಾವಾದಲ್ಲಿ ಬಾಕಿ ಇರುವ ಸಾಲ ವಸೂಲಾತಿಗಾಗಿ ದಾವಾ ಆದೇಶವನ್ನು ಕೋರಿರುತ್ತಾರೆ. ಈ ಬಗ್ಗೆ ದಿನಾಂಕ : 07.01.2021ರಂದು ಮಧ್ಯಾಹ್ನ 1.00 ಗಂಟೆಗೆ ವಾದಿಯ ಕಾರ್ಯಾಲಯದಲ್ಲಿ ದಾವಾ ವಿಚಾರಣೆಯನ್ನು ನಿಗದಿಪಡಿಸಲಾಗಿದೆ. ಅಂದು ಈ ಪ್ರಕರಣಗಳ ವಿಷಯದಲ್ಲಿ ನಿಮ್ಮ ಪರವಾದ ಲೆಕ್ಕ, ದಾಖಲಾತಿಗಳು, ಆಕ್ಷೇಪಣೆಗಳು ಮತ್ತು ಸಾಕ್ಷಿಗಳು ಇದ್ದಲ್ಲಿ ವಿಚಾರಣೆಗೆ ನೀವು ಖುದ್ದಾಗಿ ಹಾಜರಾಗಿ ಅವುಗಳನ್ನು ಸಲ್ಲಿಸಲು ಸೂಚಿಸಿದೆ. ತಪ್ಪಿದಲ್ಲಿ ನಿಮ್ಮ ಪರವಾದ ಹೇಳಿಕೆ ಏನೂ ಇಲ್ಲವೆಂದು ಪರಿಗಣಿಸಿ ನಿಮ್ಮ ಗೈರ್ ಹಾಜರಿಯಲ್ಲಿಯೇ ಲಭ್ಯವಿರುವ ದಾಖಲಾತಿಗಳನ್ವಯ ಏಕಪಕ್ಷೀಯವಾಗಿ ದಾವೆಯನ್ನು ಇತ್ಯರ್ಥಪಡಿಸಲಾಗುವುದು ಅಂತಾ ತಿಳಿಸುವ ಜಾಹಿರ್ ಪ್ರಕಟಣೆಯ ನೋಟೀಸ್.

ಸದರಿ ಪ್ರಕಟಣೆಯನ್ನು ದಿನಾಂಕ : 17.12.2020 ರಂದು ಹೊರಡಿಸಿದ ಆದೇಶದ ಮೇರೆಗೆ ವಾದಿಯಿಂದ ಜಾರಿಗೊಳಿಸಲು ಸೂಚಿಸಿದೆ.

**ಸಹಿ/- ಶ್ರೀ ಎ.ಎನ್. ಇಂಗಳಗಿ, ವಕೀಲರು**
**ವ. ಗೌರವ ಮಧ್ಯಸ್ಥಗಾರರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಪ್ರಾಂತೀಯ ಕಛೇರಿ ಬೆಳಗಾವಿ.**

# ಸಾರ್ವಜನಿಕ ಸ್ಥಳಗಳಲ್ಲಿ ವರ್ಷಾಚರಣೆಗೆ ಅವಕಾಶವಿಲ್ಲ : ಗೃಹ ಇಲಾಖೆಗೆ ಕಟ್ಟಾದೇಶ

ಬೆಂಗಳೂರು, ಡಿ. 24- ಸಾರ್ವಜನಿಕ ಸ್ಥಳಗಳಲ್ಲಿ ವರ್ಷಾಚರಣೆಗೆ ಅವಕಾಶವಿಲ್ಲ. ನಿಯಮ ಉಲ್ಲಂಘಿಸಿದರೆ, ತಪ್ಪಿತಸ್ಥರನ್ನು ವಶಕ್ಕೆ ಪಡೆಯುವಂತೆ ರಾಜ್ಯ ಸರ್ಕಾರ ಗೃಹ ಇಲಾಖೆಗೆ ಕಟ್ಟಾದೇಶ ಹೊರಡಿಸಿದೆ.

ಕೊರೊನಾ ಸೋಂಕಿನ ಎರಡನೇ ಅಲೆ ಹರಡುವಿಕೆ ತಡೆಗಾಗಿ ಈ ಅವಧಿಯಲ್ಲಿ ಯಾವುದೇ ಕಾರಣಕ್ಕೂ ಗುಂಪುಗೂಡಲು ಅವಕಾಶ ನೀಡಬೇಡಿ.

ಕರ್ಫ್ಯೂವನ್ನು ಮೀರಿ ವರ್ತನೆ ಮಾಡಿದರೆ, ಅವರ ಮೇಲೆ ಕಠಿಣ ಕ್ರಮ ತೆಗೆದುಕೊಳ್ಳಿ. ರೈಲ್ವೆ, ವಿಮಾನ, ಬಸ್ ನಿಲ್ದಾಣಗಳಲ್ಲಿ ಆಟೋ, ಟ್ಯಾಕ್ಸಿ ಲಭ್ಯವಿರುತ್ತವೆ. ಪ್ರಯಾಣಿಕರು ಭದ್ರತಾ ಸಿಬ್ಬಂದಿಗೆ ಟಿಕೆಟ್ ತೋರಿಸಿ, ಮುಂದುವರೆಯಬಹುದು, ಅನಾವಶ್ಯಕವಾಗಿ ಓಡಾಡುವವರ ಮೇಲೆ ಕ್ರಮ ಕೈಗೊಳ್ಳಿ ಎಂದಿದೆ.

ನಗರ ಮತ್ತು ಪಟ್ಟಣ ಪ್ರದೇಶದ ಪ್ರಮುಖ ರಸ್ತೆ, ಕೇಂದ್ರಗಳಲ್ಲಿ ಹೆಚ್ಚಿನ ನಿಗಾವಹಿಸಬೇಕು. ಪಬ್, ಬಾರ್, ಕ್ಲಬ್‌ಗಳು ರಾತ್ರಿ 11 ಗಂಟೆವರೆಗೆ ಮಾತ್ರ ಕಾರ್ಯನಿರ್ವಹಿಸಬೇಕು.

ಆದರೆ, ಸಾರ್ವಜನಿಕರು ಸಮಯ ಮೀರಿದ ನಂತರ ಹೊರ ಬಂದು ಅವರ ಸ್ಥಾನಗಳಿಗೆ ತೆರಳಲು ತೊಂದರೆಯಾಗುತ್ತದೆ. ಸಾರ್ವಜನಿಕರು ಪಬ್, ಬಾರ್ ತೆರೆದಿದೆ ಎಂದು 11 ಗಂಟೆಯವರೆಗೆ ಸಮಯ ಕಳೆಯಬಾರದು.

ಅದರಲ್ಲೂ ಬೆಂಗಳೂರು, ಮಂಗಳೂರು ಸೇರಿದಂತೆ ಪ್ರಮುಖ ನಗರಗಳಲ್ಲಿ ಹೊಸ ವರ್ಷಾಚರಣೆಗೆ ಕೆಲವು ರಸ್ತೆಗಳನ್ನು ಮೀಸಲಿರಿಸಿವೆ. ಅಂತಹ ರಸ್ತೆಗಳನ್ನು ಎರಡು ದಿನಗಳ ಮುನ್ನವೇ ಬಂದ್ ಮಾಡುವಂತೆ ಆದೇಶಿಸಲಾಗಿದೆ.

ಇಂದಿನಿಂದ ಜನವರಿ 1 ರವರೆಗೂ ಜಾರಿಯಲ್ಲಿರುವ ಕರ್ಫ್ಯೂ ಸಮಯದಲ್ಲಿ ಬಿಗಿ ಕ್ರಮ ಕೈಗೊಳ್ಳಬೇಕು. ಮೋಜು ಮಸ್ತಿಗೆ ಅವಕಾಶ ನೀಡಬಾರದು. ವಿದೇಶದಿಂದ ಬಂದವರು ಮೋಜು ಮಸ್ತಿಯಲ್ಲಿ ಭಾಗಿಯಾಗಿ ಸೋಂಕು ಎಲ್ಲರಿಗೂ ಹರಡುತ್ತದೆ. ಇಂತಹ ಎಚ್ಚರಿಕೆಗಳನ್ನು ಪೊಲೀಸರು ಸಾರ್ವಜನಿಕರಿಗೆ ನೀಡುವಂತೆ ಆದೇಶಿಸಲಾಗಿದೆ.

## ವೀರಶೈವ ಸಭಾ ಮಹಿಳಾ ಘಟಕದಿಂದ ಕಾರ್ತಿಕೋತ್ಸವ





ದಾವಣಗೆರೆ,ಡಿ.24- ಅಖಿಲ ಭಾರತ ವೀರ ಶೈವ ಮಹಾಸಭಾದ ಸ್ಥಳೀಯ ಮಹಿಳಾ ಘಟಕದ ವತಿಯಿಂದ ದೊಡ್ಡಪೇಟೆಯ ಶ್ರೀ ಬಸವೇಶ್ವರ ಮತ್ತು ಶ್ರೀ ದಾನಮ್ಮದೇವಿ ದೇವಸ್ಥಾನದಲ್ಲಿ ಮಹಾಸಭಾದ ನಗರ ಮಹಿಳಾ ಘಟಕದ ಅಧ್ಯಕ್ಷರಾದ ಶ್ರೀಮತಿ ಪುಷ್ಪಾ ವಾಲಿ ಅವರ ಅಧ್ಯಕ್ಷತೆಯಲ್ಲಿ ಕಾರ್ತಿಕೋತ್ಸವ ಆಚರಿಸಲಾಯಿತು.

ಮಹಾಸಭಾದ ರಾಷ್ಟ್ರೀಯ ಉಪಾಧ್ಯಕ್ಷ ಅಥಣಿ ವೀರಣ್ಣ, ಜಿಲ್ಲಾಧ್ಯಕ್ಷ ದೇವರಮನಿ ಶಿವಕುಮಾರ್, ಮಹಾನಗರ ಪಾಲಿಕೆ ಸದಸ್ಯರಾದ ಸ್ವಾಗಿ ಶಾಂತಕುಮಾರ್, ಸಹ ಸಂಚಾಲಕ ಟಿಂಕರ್ ಮಂಜಣ್ಣ, ದೇವಸ್ಥಾನದ ಟ್ರಸ್ಟಿ ಬೇತೂರು ರಾಜೇಶ್, ಶಿವು ಬೆನ್ನೂರು ಮತ್ತಿತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಮಹಾಸಭಾ ಮಹಿಳಾ ಘಟಕದ ಪದಾಧಿಕಾರಿಗಳಾದ ರೂಪ ಶಿವಕುಮಾರ್, ಸುಮಾ ಮಲ್ಲಿಕಾರ್ಜುನ್, ಸುಶೀಲಮ್ಮ, ಮಂಜುಳ ಇಟಗಿ, ವಸಂತ, ಸುನಂದ, ಸರ್ವಮಂಗಳ, ವನಿತಾ, ಸುಜಾತ, ರೇಣುಕ, ಮಂಜುಳ, ಊಮಾ ವಾಲಿಶೆಟ್ಟರ್ ಇನ್ನಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ಜೀವದಾನಕ್ಕಾಗಿ ರಕ್ತದಾನ ಮಾಡಲು ಕರೆ



**ಹರಪನಹಳ್ಳಿ : ಎಂ.ಪಿ.ವೀಣಾ ಮಹಾಂತೇಶ್**

ಹರಪನಹಳ್ಳಿ, ಡಿ.24- ಜಾತಿ, ಧರ್ಮವನ್ನು ಮರೆತು ಜೀವದಾನಕ್ಕಾಗಿ ರಕ್ತದಾನ ಮಾಡುವುದು ಮಾನವ ಧರ್ಮದ ಶ್ರೇಷ್ಟತೆಯನ್ನು ತೋರುತ್ತದೆ ಎಂದು ಕೆಪಿಸಿಸಿ ಮಾಧ್ಯಮ ವಿಶ್ಲೇಷಕರಾದ ಶ್ರೀಮತಿ ಎಂ.ಪಿ. ವೀಣಾ ಮಹಾಂತೇಶ್ ಹೇಳಿದರು.

ಪಟ್ಟಣದ ಹೊಸಪೇಟೆ ರಸ್ತೆಯಲ್ಲಿರುವ ಸಂಪೂರ್ಣ ಸುವಾರ್ತಾ ಚರ್ಚ್‌ನಲ್ಲಿ ತಾಲ್ಲೂಕು ಆರೋಗ್ಯ ಇಲಾಖೆ ಸಹಯೋಗದೊಂದಿಗೆ ಕ್ರಿಸ್‌ಮಸ್ ಹಬ್ಬದ ಪ್ರಯುಕ್ತ ಆಯೋಜಿಸಲಾಗಿದ್ದ ಸ್ವಯಂ ಪ್ರೇರಿತ ರಕ್ತದಾನ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸೇವಾ ಮನೋಭಾವಕ್ಕೆ ಧರ್ಮ ಅಡ್ಡಿಯಲ್ಲ. ಧರ್ಮಗಳು ಮನುಷ್ಯ ಮನುಷ್ಯನನ್ನು ಪ್ರೀತಿಸುವಂತೆ ಹೇಳುತ್ತವೆಯೇ ಹೊರತು, ದ್ವೇಷಿಸುವುದಕ್ಕಲ್ಲ. ರಕ್ತದಾನದೊಂದಿಗೆ ನೇತ್ರ ಹಾಗೂ ಅಂಗಾಂಗ ದಾನಗಳನ್ನು ಮಾಡುವ ಮನಸ್ಥಿತಿ ಹೆಚ್ಚಾಗಬೇಕಿದೆ. ಆಗ ಮಾತ್ರ ಮಾನವ ಜನ್ಮಕ್ಕೆ ಸಾರ್ಥಕತೆ ಬರುವುದು. ತಾಳ್ಮೆ ಹಾಗೂ ಸಹಕಾರ ಮನೋಭಾವದ ಯೇಸುವಿನ ಜನ್ಮ ದಿನಕ್ಕಾಗಿ ಹಮ್ಮಿಕೊಂಡಿರುವ ರಕ್ತದಾನ ಶಿಬಿರ ಅತ್ಯಂತ ಸ್ಮರಣೀಯವಾಗಿದೆ ಎಂದರು.

ಪುರಸಭೆ ಸದಸ್ಯ ಹರಾಳ್ ಹೆಚ್.ಎಂ. ಅಶೋಕ್ ಮಾತನಾಡಿ, ಸೇವಾ ಮನೋಭಾವ ಕೇವಲ ಭಾವನೆಯಾಗಿದೆ. ರಕ್ತದಾನದ ಮೂಲಕ ಸೇವೆ ಆರಂಭವಾಗಬೇಕಿದೆ. ಕೋವಿಡ್ ಸಮಯದಲ್ಲಿ ರಕ್ತದಾನಕ್ಕೆ ಮುಂದಾಗುವ ದಾನಿಗಳ ಜೀವನ ಶ್ರೇಷ್ಟತೆಯನ್ನು ಸೂಚಿಸುತ್ತದೆ ಎಂದರು. ಚರ್ಚ್‌ನ ಫಾದರ್ ನೀಲ್ ಆರ್ಮಸ್ಟ್ರಾಂಗ್ ಮಾತನಾಡಿ, ಪ್ರತಿ ಆರು ತಿಂಗಳಿಗೊಮ್ಮೆ ರಕ್ತದಾನ ಶಿಬಿರವನ್ನು ಹಮ್ಮಿಕೊಳ್ಳಲಾಗುವುದು ಎಂದರು.

ಪುರಸಭೆ ಮಾಜಿ ಅಧ್ಯಕ್ಷರಾದ ಕವಿತಾ ವಾಗೀಶ್, ತಾಲ್ಲೂಕು ವೈದ್ಯಾಧಿಕಾರಿ ವೆಂಕಟೇಶ್, ಹೆಚ್‌ಐವಿ ಆಪ್ತಸಮಾಲೋಚಕ ಮಲ್ಲಿಕಾರ್ಜುನಯ್ಯ ಮತ್ತಿತರರು ಕಾರ್ಯಕ್ರಮದಲ್ಲಿ ಹಾಜರಿದ್ದರು.

# ಇ.ಡಿ.ಯಿಂದ 4 ಸಾವಿರ ಕೋಟಿ ರೂ. ಆಸ್ತಿ ವಶ

**ಅಗ್ರಿ ಗೋಲ್ಡ್ ವಂಚನೆ ಪ್ರಕರಣ**

ನವದೆಹಲಿ, ಡಿ. 24 – ಕರ್ನಾಟಕ ಸೇರಿದಂತೆ ಹಲವು ರಾಜ್ಯಗಳಲ್ಲಿ ವಂಚನೆ ನಡೆಸಿದ್ದ ಅಗ್ರಿ ಗೋಲ್ಡ್ ಪೊಂಜಿ ಯೋಜನೆಗೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ 4,109 ಕೋಟಿ ರೂ. ಮೌಲ್ಯದ ಆಸ್ತಿಯನ್ನು ವಶಪಡಿಸಿಕೊಂಡಿದೆ.

ಅಗ್ರಿ ಗೋಲ್ಡ್ ಗ್ರೂಪ್ ಸಮೂಹದ ಕಂಪ ನಿಗಳಿಗೆ ಸಂಬಂಧಿಸಿದಂತೆ ಕ್ರಮ ತೆಗೆದುಕೊಳ್ಳ ಲಾಗಿದೆ. ಸಮೂಹದ ಪ್ರವರ್ತಕರಾಗಿರುವ ಮೂವರನ್ನು ಜಾರಿ ನಿರ್ದೇಶನಾಲಯ ಮಂಗಳವಾರ ವಶಕ್ಕೆ ತೆಗೆದುಕೊಂಡಿತ್ತು.

2,809 ಸ್ಥಿರಾಸ್ತಿ, ಆಂಧ್ರ ಪ್ರದೇಶದಲ್ಲಿರುವ ಅರ್ಕಾ ಲೀಶರ್ ಹೆಸರಿನಲ್ಲಿರುವ ಹೈಲ್ಯಾಂಡ್ ಅಮ್ಯೂಸ್‌ಮೆಂಟ್ ಪಾರ್ಕ್ ಹಾಗೂ ಹಲವು ಕಂಪನಿಗಳ ಘಟಕಗಳು ಹಾಗೂ ಯಂತ್ರೋಪಕ ರಣಗಳನ್ನು ವಶಪಡಿಸಿಕೊಳ್ಳಲಾಗಿದೆ.

ಆಂಧ್ರಪ್ರದೇಶ, ಕರ್ನಾಟಕ, ಒಡಿಶಾ, ತಮಿಳುನಾಡು ಹಾಗೂ ತೆಲಂಗಾಣಗಳಲ್ಲಿ ಆಸ್ತಿಗಳನ್ನು ವಶಪಡಿಸಿಕೊಳ್ಳಲಾಗಿದೆ.


32 ಲಕ್ಷ ಹೂಡಿಕೆದಾರರಿಂದ 6,380 ಕೋಟಿ ರೂ.ಗಳನ್ನು ಪಡೆದು ವಂಚಿಸಲಾಗಿದೆ ಎಂದು ಕರ್ನಾಟಕ, ಆಂಧ್ರ ಪ್ರದೇಶ ಹಾಗೂ ತೆಲಂಗಾಣಗಳಲ್ಲಿ ಹಲವಾರು ದೂರುಗಳನ್ನು ದಾಖಲಿಸಲಾಗಿತ್ತು.

ಪ್ರಕರಣದ ಮೂವರು ಪ್ರಮುಖ ಆರೋಪಿಗಳಾದ ವೆಂಕಟ ರಾಮ ರಾವ್, ವೆಂಕಟ ಎಸ್. ನಾರಾಯಣ ರಾವ್ ಹಾಗೂ ಹೇಮ ಸುಂದರ ವರ ಪ್ರಸಾದ್ ಈಗಾಗಲೇ ಜಾರಿ ನಿರ್ದೇಶನಾಲಯದ ವಶದಲ್ಲಿದ್ದಾರೆ.

ವಂಚಕರು ಈ ಹಿಂದೆ ಗೋಲ್ಡನ್ ಫಾರೆಸ್ಟ್ ಸಿಐಎಸ್ ಕಂಪನಿಯಲ್ಲಿ ಕೆಲಸ ಮಾಡಿದ್ದರು. ಅಲ್ಲಿ ವಂಚನೆಯ ತಂತ್ರಗಳನ್ನು ಕಲಿತಿದ್ದ ಆರೋಪಿಗಳು, ನಂತರ ಹೊಸ ವಂಚನೆ ಜಾಲ ಹೆಣೆದಿದ್ದಾರೆ ಎಂದು ಆರೋಪಿಸಲಾಗಿದೆ.

ವೆಂಕಟರಾವ್ ಏಳು ಸಹೋದರರು ಹಾಗೂ ಸಹಚರರು ಸೇರಿಕೊಂಡು 150ಕ್ಕೂ ಹೆಚ್ಚು ಕಂಪನಿಗಳ ಮೂಲಕ ಸಾರ್ವಜನಿಕರಿಂದ ಠೇವಣಿ ಪಡೆದಿದ್ದಾರೆ. ಈ ಹಣದಿಂದ ಜಮೀನು ಅಭಿವೃದ್ಧಿ ಪಡಿಸಿ ಹೆಚ್ಚಿನ ಹಣ ನೀಡುವುದಾಗಿ ಇವರು ಜನರಿಗೆ ವಂಚಿಸಿದ್ದಾರೆ. ಠೇವಣಿ ಪಡೆಯಲು ಅಗ್ರಿ ಗೋಲ್ಡ್ ರಿಸರ್ವ್ ಬ್ಯಾಂಕ್‌ನಿಂದ ಅನುಮತಿ ಪಡೆದಿರಲಿಲ್ಲ.

## 28 ರಂದು ನಗರದಲ್ಲಿ ಕೊಟ್ಟೂರು ಶ್ರೀ ಗುರು ಬಸವೇಶ್ವರ ಕಾರ್ತಿಕ



ದಾವಣಗೆರೆ, ಡಿ.24- ಇದೇ ದಿನಾಂಕ 28 ರ ಸೋಮವಾರ ಸಂಜೆ 6 ಕ್ಕೆ ನಗರದ ಮಾಗಾನಹಳ್ಳಿ ಕೋಡಿ ಕ್ಯಾಂಪ್, ಶ್ರೀ ಗುರು ಕೊಟ್ಟೂರು ಬಸವೇಶ್ವರ ನಗರ, ಮಾಗಾನಹಳ್ಳಿ (ಕಂಚಿಕೆರೆ ರಸ್ತೆ)ಯ ಶ್ರೀ ಗುರು ಕೊಟ್ಟೂರೇಶ್ವರ ದೇವಸ್ಥಾನದಲ್ಲಿ ಶ್ರೀ ಗುರು ಕೊಟ್ಟೂರೇಶ್ವರ ಕಾರ್ತಿಕ ದೀಪೋತ್ಸವ ನಡೆಯಲಿದೆ. ಅಂದು ಬೆಳಿಗ್ಗೆ 6 ಗಂಟೆಗೆ ಶ್ರೀ ಗುರು ಕೊಟ್ಟೂರೇಶ್ವರರ ಪಾದಗಳಿಗೆ ರುದ್ರಾಭಿಷೇಕ, 7.30 ಕ್ಕೆ ಪ್ರಸಾದ ಏರ್ಪಡಿಸಲಾಗಿದೆ ಎಂದು ಕೊಟ್ಟೂರು ಶ್ರೀ ಗುರುಬಸವರಾಜೇಂದ್ರ ಸ್ವಾಮಿ ಪಾದಯಾತ್ರೆ ಟ್ರಸ್ಟ್‌ನ ಅಧ್ಯಕ್ಷ ಕೆ. ಮುರುಗೇಶಪ್ಪ (96118 89151) ತಿಳಿಸಿದ್ದಾರೆ.

## ಕ್ಷಯರೋಗ ಪತ್ತೆ - ಚಿಕಿತ್ಸೆ ಆಂದೋಲನಕ್ಕೆ ಚಾಲನೆ



ರಾಣೇಬೆನ್ನೂರು

ರಾಣೇಬೆನ್ನೂರು, ಡಿ.24 - ಸಾರ್ವಜನಿಕರು ಸರ್ಕಾರದ ಯೋಜನೆಗಳನ್ನು ಸದ್ಬಳಕೆ ಮಾಡಿಕೊಳ್ಳುವ ಮೂಲಕ ಆರೋಗ್ಯಕರ ಜೀವನ ನಡೆಸಬೇಕು ಎಂದು ತಾಲೂಕು ಆರೋಗ್ಯಾಧಿಕಾರಿ ಡಾ. ಜಿ. ಸಂತೋಷ್ ಕುಮಾರ್ ಹೇಳಿದರು.

ಜಿಲ್ಲಾ ಕ್ಷಯರೋಗ ನಿಯಂತ್ರಣ ಕೇಂದ್ರ, ತಾಲ್ಲೂಕು ಘಟಕ ಹಾಗೂ ನವಜೀವನ ಫೌಂಡೇಶನ್ ಆಶ್ರಯದಲ್ಲಿ ಬುಧವಾರ ನಗರದ ಹಲಗೇರಿ ರಸ್ತೆಯ ಬದಿಯ ಗುಡಿಸಲಲ್ಲಿ ವಾಸಿಸುತ್ತಿರುವ ಕುಟುಂಬಗಳಿಗೆ ಸಕ್ರಿಯ ಕ್ಷಯರೋಗ ಪತ್ತೆ ಹಾಗೂ ಚಿಕಿತ್ಸೆ ಆಂದೋಲನ-2020ರ ಮಾಹಿತಿ ನೀಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಕೋವಿಡ್ ಪರಿಸ್ಥಿತಿಯಲ್ಲಿ ಕ್ಷಯ ರೋಗವನ್ನು ಪತ್ತೆ ಹಚ್ಚುವ ಕಾರ್ಯಕ್ರಮವಾಗಿದ್ದು, ಇಂತಹ ಸಮೀಕ್ಷೆಗಳ ಮೂಲಕ ಹೆಚ್ಚಿನ ಪ್ರಮಾಣದಲ್ಲಿ ಕ್ಷಯರೋಗಿಗಳನ್ನು ಪತ್ತೆ ಹಚ್ಚಿ ಚಿಕಿತ್ಸೆ ನೀಡಲು ಸಹಾಯವಾಗುತ್ತದೆ. ಆದ್ದರಿಂದ ಸಾರ್ವಜನಿಕರು ಆರೋಗ್ಯ ಸಿಬ್ಬಂದಿ ಹಾಗೂ ಆಶಾ ಕಾರ್ಯಕರ್ತೆಯರು ಮನೆಗೆ ಬಂದಾಗ ಸಂಪೂರ್ಣವಾದ ಮಾಹಿತಿ ನೀಡುವ ಮೂಲಕ ಸಹಕರಿಸಬೇಕು ಎಂದರು.

ನೇತ್ರ ತಜ್ಞ ಡಾ. ಶಿವಯೋಗಿ ಗಡಾದ ಮಾತನಾಡಿ, ಕ್ಷಯರೋಗದ ಬಗ್ಗೆ ಭಯಪಡದೇ ಸಾರ್ವಜನಿಕರು ಮುನ್ನೆಚ್ಚರಿಕೆ ಕ್ರಮಗಳನ್ನು ಅನುಸರಿಸುವ ಮೂಲಕ ಆರೋಗ್ಯಕರ ಜೀವನ ನಡೆಸಬೇಕು ಎಂದರು.

ಪ್ರಾಸ್ತಾವಿಕವಾಗಿ ಹಿರಿಯ ಚಿಕಿತ್ಸಾ ಮೇಲ್ವಿಚಾರಕ ಜಗದೀಶ ಪಾಟೀಲ ಮಾತನಾಡಿ, ತಾಲ್ಲೂಕಿನಲ್ಲಿ 2 ಹಂತಗಳಲ್ಲಿ ಸಮೀಕ್ಷೆ ಕಾರ್ಯ ನಡೆಯುತ್ತಿದೆ. ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ದುರ್ಬಲ ವರ್ಗದವರ 15,088 ಮನೆಗಳನ್ನು ಗುರುತಿಸಿದ್ದು, ಅದರಲ್ಲಿ 71,320 ಜನರನ್ನು ಸಮೀಕ್ಷೆ ಮಾಡುವ ಗುರಿ ಹೊಂದಿದೆ. ಇದಕ್ಕಾಗಿ ವಿವಿಧ ಹಂತಗಳಲ್ಲಿ ತರಬೇತಿ ನೀಡಲಾಗಿದ್ದು, 220 ಆಶಾ ಕಾರ್ಯಕರ್ತೆಯರು ಹಾಗೂ 101 ಆರೋಗ್ಯ ಇಲಾಖೆಯ ಸಿಬ್ಬಂದಿಯನ್ನು ಸಮೀಕ್ಷೆಗೆ ನಿಯೋಜನೆ ಮಾಡಲಾಗಿದೆ ಎಂದರು.

ಈ ಸಮಯದಲ್ಲಿ ನಗರ ಕ್ಷಯ ರೋಗ ಆರೋಗ್ಯ ಸಂದರ್ಶಕ ಗಿರೀಶ್ ಮುರನಾಳ, ನಾಗರಾಜ, ಜೆ.ಒ. ಪಾಟೀಲ, ಶಿಲ್ಪಾ, ಸವಿತಾ, ರಾಜೇಶ್ವರಿ, ಶೋಭಾ, ಮಮತಾ, ಸುಧಾ ಸೇರಿದಂತೆ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ನಗರದ ಶ್ರೀ ಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಧನುರ್ಮಾಸದ ಪೂಜೆ




ಡಿ. ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್‌ನಲ್ಲಿರುವ ಶ್ರೀಮತಿ ಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಧನುರ್ಮಾಸದ ಪೂಜಾ ಕಾರ್ಯಕ್ರಮಗಳು ಇದೇ ದಿನಾಂಕ 16ರಿಂದ ಆರಂಭಗೊಂಡಿದ್ದು, ಬರುವ ಜನವರಿ 14ರವರೆಗೆ ನಡೆಯಲಿವೆ.

ದೇವಸ್ಥಾನದ ಶ್ರೀ ವಿನಾಯಕ ಸೇವಾ ಸಮಿತಿ ಆಶ್ರಯದಲ್ಲಿ ಏರ್ಪಾಡಾಗಿರುವ ಈ ಪೂಜಾ ಕಾರ್ಯಕ್ರಮ ಗಳಲ್ಲಿ ಪ್ರತಿದಿನ ಬೆಳಿಗ್ಗೆ 6.30ಕ್ಕೆ ಶ್ರೀ ಅಮ್ಮನವರಿಗೆ ವೈಯಕ್ತಿಕ ಪೂಜೆಗಳು ಜರುಗಲಿವೆ. ಭಾಗವಹಿಸಲಿಚ್ಛಿಸುವ ಸೇವಾರ್ಥಿಗಳು ತಮ್ಮ ಸೇವೆಯ ದಿನಾಂಕವನ್ನು ದೇವಸ್ಥಾನದಲ್ಲಿ ಮುಂಚಿತವಾಗಿ ನೋಂದಾಯಿಸಬೇಕು.

ಇಂದು ವೈಕುಂಠ ಏಕಾದಶಿ, ಇದೇ ದಿನಾಂಕ 27ರ ಭಾನುವಾರ ಬೆಳಿಗ್ಗೆ 8 ಗಂಟೆಗೆ ವಿಶೇಷ ಪೂಜೆ, ದಿನಾಂಕ 30ರ ಬುಧವಾರದ ಹೊಸ್ತಿಲು ಹುಣ್ಣಿಮೆಯಂದು ಶ್ರೀ ದತ್ತಾತ್ರೇಯ ಜಯಂತಿ ಜರುಗಲಿದೆ ಎಂದು ದೇವಸ್ಥಾನ ಸಮಿತಿ ಅಧ್ಯಕ್ಷ ಆರ್.ಜಿ. ನಾಗೇಂದ್ರ ಪ್ರಕಾಶ್ ತಿಳಿಸಿದ್ದಾರೆ.

## ನಗರದಲ್ಲಿಂದು ಚಾಮುಂಡೇಶ್ವರಿ ಕಾರ್ತಿಕ



ಪಿ.ಬಿ. ರಸ್ತೆಯ ನೀಲಮ್ಮನ ತೋಟದಲ್ಲಿರುವ ಶ್ರೀ ಚಾಮುಂಡೇಶ್ವರಿ ಅಮ್ಮನವರ ಕಾರ್ತಿಕೋತ್ಸವ ಇಂದು ನಡೆಯಲಿದೆ. ಬೆಳಿಗ್ಗೆ ಅಮ್ಮನವರಿಗೆ ವಿಶೇಷ ಪೂಜೆ, ಅಭಿಷೇಕ, ಅಲಂಕಾರ ನಡೆಯಲಿವೆ. ಮಧ್ಯಾಹ್ನ 12.30ಕ್ಕೆ ಅನ್ನ ಸಂತರ್ಪಣೆ, ಸಂಜೆ 7.30 ಕ್ಕೆ ಕಾರ್ತಿಕೋತ್ಸವ ನಡೆಯಲಿದೆ.

## ಪ್ರಶಸ್ತಿ : ಶಿಕ್ಷಕಿ ಮಂಜುಳಾಗೆ ಸನ್ಮಾನ



ದಾವಣಗೆರೆ, ಡಿ.24 - ಕರ್ನಾಟಕ ರಾಜ್ಯ ಶಿಕ್ಷಕ ಪ್ರತಿಭಾ ಪರಿಷತ್ (ಮೈಸೂರು) ಕೊಡಮಾಡುವ 'ಗುರುಭೂಷಣ ರಾಜ್ಯ ಪ್ರಶಸ್ತಿ'ಗೆ ಭಾಜನರಾಗಿರುವ ಇಲ್ಲಿನ ಯಲ್ಲಮ್ಮ ನಗರದ ಸರ್ಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆ ಕನ್ನಡ ಸಹ ಶಿಕ್ಷಕಿ ಶ್ರೀಮತಿ ಎಸ್. ಮಂಜುಳಾ ಬಸವನಗೌಡ ಪಾಟೀಲ್ ಅವರನ್ನು ಸರ್ಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಿನ್ನೆ ಏರ್ಪಾಡಾಗಿದ್ದ ಸರಳ ಸಮಾರಂಭದಲ್ಲಿ ಶಾಲು ಹೊದಿಸಿ, ಪೇಟ ತೊಡಿಸಿ ಸನ್ಮಾನಿಸಲಾಯಿತು. ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷ ತಯಾಜ್ ಅಹ್ಮದ್, ಬಿ.ಆರ್.ಪಿ. ಕರಿಬಸಪ್ಪ, ಮುಖ್ಯ ಶಿಕ್ಷಕಿ ಶಾತಾಜ್ ಬಾನು, ವಿನೋಬನಗರ ಶಾಲೆಯ ಮುಖ್ಯ ಶಿಕ್ಷಕಿ ಶೋಭಾ, ಉರ್ದು ಶಾಲೆ ಸಹ ಶಿಕ್ಷಕರಾದ ನಾಜೀಮ ಖಾನಂ, ಶಾಹಿನ ಪರ್ವಿನ್, ಸೈರಾ ಬಾನು, ನೂರ್ ಆಯಿಷಾ ಮತ್ತಿತರರು ಉಪಸ್ಥಿತರಿದ್ದರು.

## ನಗರದಲ್ಲಿ ಇಂದು ಓಶೋ ಧ್ಯಾನ ಶಿಬಿರ

ಓಶೋ ಸನ್ನಿಧಿ ಇನ್‌ಸೈಟ್ ಫೌಂಡೇಷನ್ ಆಶ್ರಯದಲ್ಲಿ ಇಂದಿನಿಂದ ಇದೇ ದಿನಾಂಕ 27 ರವರೆಗೆ ಧ್ಯಾನ ಶಿಬಿರವನ್ನು ಪ್ರತಿದಿನ ಬೆಳಿಗ್ಗೆ 6 ಗಂಟೆಗೆ ನಗರದ ಎಸ್.ಎಸ್. ಲೇಔಟ್‌ನಲ್ಲಿರುವ ಲಿಟ್ಲ್ ಚಾಂಪ್ಸ್ ಗುರುಕುಲಂ ನಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಅರ್ಚನ (97385 72318), ಪುಷ್ಪ (90367 19573) ತಿಳಿಸಿದ್ದಾರೆ.






## ಶ್ರೀ ದಾನಮ್ಮ ದೇವಿಯ ಜಾತ್ರೋತ್ಸವ

ದಾವಣಗೆರೆ, ಡಿ.24- ನಗರದ ದೊಡ್ಡಪೇಟೆಯಲ್ಲಿರುವ ಶ್ರೀ ಬಸವೇಶ್ವರ ಮತ್ತು ಶ್ರೀ ದಾನಮ್ಮದೇವಿ ದೇವಸ್ಥಾನ ದಲ್ಲಿ ಶ್ರೀ ದಾನಮ್ಮ ದೇವಿಯ ಜಾತ್ರೋತ್ಸವವನ್ನು ಸರಳವಾಗಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷರಾದ ಅಥಣಿ ಎಸ್. ವೀರಣ್ಣ, ಸಂಚಾಲಕ ಬೇತೂರು ರಾಜೇಶ್, ಹೊಳೆಹೊನ್ನೂರು ಈಶಪ್ಪ, ಬೇತೂರು ಪ್ರದೀಪ್, ದಾನಯ್ಯ, ಷಣ್ಮುಖಪ್ಪ ಮತ್ತಿತರರಿದ್ದರು. ಭಕ್ತಾದಿಗಳು ದೇವಿಯ ದರ್ಶನ ಪಡೆದು ಪುನೀತರಾದರು.

## ನಗರದಲ್ಲಿ ಇಂದು ವೈಕುಂಠ ಏಕಾದಶಿ



ಎಂ.ಸಿ.ಸಿ. 'ಬಿ' ಬ್ಲಾಕ್‌ನಲ್ಲಿರುವ ಶ್ರೀ ಲಕ್ಷ್ಮೀವೆಂಕಟೇಶ್ವರ ಸ್ವಾಮಿ ದೇವಸ್ಥಾನದಲ್ಲಿ ವೈಕುಂಠ ಏಕಾದಶಿ ಮಹೋತ್ಸವವನ್ನು ಇಂದು ಆಚರಿಸಲಾಗುತ್ತದೆ. ಕೋವಿಡ್ ಹಿನ್ನೆಲೆಯಲ್ಲಿ ಭಕ್ತಾದಿಗಳಿಗೆ ದೇವಸ್ಥಾನದ ಪ್ರವೇಶ ರದ್ದುಪಡಿಸಲಾಗಿದೆ.

## ಶ್ರೀ ವಿನಾಯಕ ಎಜುಕೇಷನ್ ಟ್ರಸ್ಟ್‌ಗೆ ಎಸ್.ಎ. ಮುರುಗೇಶ್ ಗೌರವ ಕಾರ್ಯದರ್ಶಿ



ದಾವಣಗೆರೆ,ಡಿ.24- ನಗರದ ಶ್ರೀ ಶ್ರೀಶೈಲ ಜಗದ್ಗುರು ವಾಗೀಶ ಪಂಡಿತಾರಾಧ್ಯ ಕೃಪಾಪೋಷಿತ ಶ್ರೀ ವಿನಾಯಕ ಎಜುಕೇಷನ್ ಟ್ರಸ್ಟ್ ಆಡಳಿತ ಮಂಡಳಿ ಗೌರವ ಕಾರ್ಯದರ್ಶಿಯಾಗಿ ಎಸ್.ಎ. ಮುರುಗೇಶ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಶ್ರೀಶೈಲ ಪೀಠದ ಜಗದ್ಗುರು ಶ್ರೀ ಡಾ. ಚನ್ನಸಿದ್ದರಾಮ ಪಂಡಿತಾರಧ್ಯರ ಅಧ್ಯಕ್ಷತೆಯಲ್ಲಿ ನಿನ್ನೆ ನಡೆದ ಟ್ರಸ್ಟ್ ಆಡಳಿತ ಮಂಡಳಿಯ ಸಭೆಯಲ್ಲಿ ಈ ಆಯ್ಕೆ ನಡೆಯಿತು.

ಕೆ.ಎಂ. ಹೊಳಿಯಪ್ಪ, ಎಂ.ಹೆಚ್. ನಿಜಾನಂದ, ಬಿ.ಸಿ. ಉಮಾಪತಿ, ಸುಗಂಧರಾಜ ಶೆಟ್ರು, ಆರ್. ವೆಂಕಟರೆಡ್ಡಿ, ಆರ್. ರಮಾನಂದ, ಬಿ.ವಿ. ಮಹೇಶ್ ಚಂದ್ರ ಬಾಬು, ಬಿ.ಸಿ. ಶಿವಕುಮಾರ್, ಎಸ್.ಕೆ. ವೀರಣ್ಣ ಅವರುಗಳು ಸಭೆಯಲ್ಲಿ ಉಪಸ್ಥಿತರಿದ್ದರು.


**ಹೃತ್ಪೂರ್ವಕ ಅಭಿನಂದನೆಗಳು**

ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯದ ಜೈವಿಕ ತಂತ್ರಜ್ಞಾನ ವಿಭಾಗದ ಮುಖ್ಯಸ್ಥರಾದ

**ಡಾ|| ಬಿ.ಇ. ರಂಗಸ್ವಾಮಿ**

ಅವರು ವಿಶ್ವೇಶ್ವರಾಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ ಇದರ ಮೌಲ್ಯಮಾಪನ ಕುಲಸಚಿವರಾಗಿ ಎರಡು ವರ್ಷಗಳ ಕಾಲ ನಿಯುಕ್ತಿಗೊಂಡಿರುತ್ತಾರೆ. ಇವರಿಗೆ ಬಾಪೂಜಿ ವಿದ್ಯಾಸಂಸ್ಥೆಯ ಪರವಾಗಿ ಹೃತ್ಪೂರ್ವಕ ಅಭಿನಂದನೆಗಳು.



ಡಾ. ಶಾಮನೂರು ಶಿವಶಂಕರಪ್ಪ, ಗೌರವ ಕಾರ್ಯದರ್ಶಿಗಳು
ಶ್ರೀ ಆರ್.ರಮಾನಂದ, ಅಧ್ಯಕ್ಷರು
ಶ್ರೀ ಎಸ್.ಎಸ್. ಮಲ್ಲಿಕಾರ್ಜುನ, ಗೌರವ ಜಂಟಿಕಾರ್ಯದರ್ಶಿಗಳು

ಬಾಪೂಜಿ ವಿದ್ಯಾಸಂಸ್ಥೆ (ರಿ), ದಾವಣಗೆರೆ.

ನಿರ್ದೇಶಕರು, ಪ್ರಾಂಶುಪಾಲರು, ಸಿಬ್ಬಂದಿವರ್ಗ ಮತ್ತು ವಿದ್ಯಾರ್ಥಿಗಳು,

ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯ, ದಾವಣಗೆರೆ.



**ಆರನೇ ವರ್ಷದ ಪುಣ್ಯಸ್ಮರಣೆ**



**ಶ್ರೀಮತಿ ರಂಗಮ್ಮ** (ದಿ|| ಕಾಳೇಗೌಡರ ಧರ್ಮಪತ್ನಿ)

ನೀವು ನಮ್ಮನ್ನಗಲಿ ಇಂದಿಗೆ 6 ವರ್ಷವಾಯಿತು.
ನಿಮ್ಮ ಆದರ್ಶಗಳೇ ನಮಗೆ ದಾರಿ ದೀಪ. ನೀವು ಹಾಕಿಕೊಟ್ಟ ಸನ್ಮಾರ್ಗದಲ್ಲೇ ನಡೆಯುತ್ತಾ ಸದಾ ನಿಮ್ಮ ಸ್ಮರಣೆಯಲ್ಲಿರುವ

ಶ್ರೀಮತಿ ಲಕ್ಷ್ಮೀ, ಶ್ರೀ ಕೇಶವ್ ಕೆ. ಮತ್ತು ಮಕ್ಕಳು, ದಾವಣಗೆರೆ
ಶ್ರೀಮತಿ ಜಯಲಕ್ಷ್ಮಮ್ಮ, ಶ್ರೀ ಜಿ.ಸಿ.ರಾಜಣ್ಣ ಅಧ್ಯಕ್ಷರು,
ಶ್ರೀ ಮೃತ್ಯುಂಜಯ ಸ್ಕೂಲ್ ಆಫ್ ನರ್ಸಿಂಗ್ ಮತ್ತು ಮಕ್ಕಳು, ದಾವಣಗೆರೆ
ಶ್ರೀಮತಿ ಅಕ್ಕಮ್ಮ ಮತ್ತು ಮಕ್ಕಳು, ದಾವಣಗೆರೆ
ಶ್ರೀಮತಿ ರತ್ನಮ್ಮ ರಮೇಶ್ ಕೆ ಮತ್ತು ಮಕ್ಕಳು, ದಾವಣಗೆರೆ
ಶ್ರೀಮತಿ ಮಂಜುಳ, ಶ್ರೀ ಗುರುರಾಜ್ ಮತ್ತು ಮಕ್ಕಳು, ದಾವಣಗೆರೆ
ಶ್ರೀಮತಿ ಹೇಮಾವತಿ, ಶ್ರೀ ಮಂಜುನಾಥ್ ಮತ್ತು ಮಕ್ಕಳು,ದಾವಣಗೆರೆ
ಶ್ರೀಮತಿ ಜಯಮ್ಮ, ಶ್ರೀ ಜಯರಾಂ ಮತ್ತು ಮಕ್ಕಳು,ಭದ್ರಾವತಿ

ಮೊಮ್ಮಕ್ಕಳಾದ:
ಕುಶಾಲ್ ಗೌಡ ಸಿ.ಎಲ್., ಋಷಿಗೌಡ ಸಿ.ಎಲ್., ಚಂದ್ರಶೇಖರ್ ಜಿ., ರೋಹಿಣಿ ಜಿ., ಚೈತ್ರಾ ಆರ್., ಮನೋಜ್ ಆರ್., ರೋಹಿತ್‌ಗೌಡ ಎಂ., ರಚನಾ ಎಂ


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte